7. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ.

ಶ್ರೀ ಬಿ.ಆರ್.ಯಾವಗಲ್(ನರಗುಂದ):- ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

"2002ನೇ ಜನವರಿ 21ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ, ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ"

ಶ್ರೀ ಕರಿಯಣ್ಣ(ಹೊಳೆಹೊನ್ನೂರು):- ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

(ಗೊಂದಲ)

ಅಧ್ಯಕ್ಷರು:- ಮೊದಲು ವಿರೋಧಪಕ್ಷದ ನಾಯಕರು ಏನು ಹೇಳಿದರು ಎಂದರೆ ನಮಗೆ ಡಿಸ್ಕಷನ್‌ಗೆ ಅಲೋ ಮಾಡಿ ಸಾಕೆಂದು ಹೇಳಿದ್ದರು, ಡಿಸ್ಕಷನ್‌ಗೆ ಅಲೋ ಮಾಡಿದ್ದಾಯಿತು, ಅವರು ಒಪ್ಪಲಿಲ್ಲ ಮತ್ತೆ ಗಲಾಟೆಗಳಾಗಿ ಪುನಃ ಧರಣಿ ಎಲ್ಲಾ ಆಗಿ, ಸರ್ಕಾರದವರು ಹಾಗೂ ವಿರೋಧಪಕ್ಷದವರೆಲ್ಲಾ ನಮ್ಮ ಕಛೇರಿಗೆ ಬಂದರು, ಎಲ್ಲಾ ಒಪ್ಪಿ ಎಲ್ಲಾ ಆಯಿತು, ಡಿಸ್ಕಷನ್ ಆಯಿತು, ಸಫಿಷಿಯೆಂಟ್ ಆಗಿ ಉತ್ತರವನ್ನು ಕೊಟ್ಟಾಯಿತು, ಇದರಲ್ಲಿ ಇನ್ನೇನು ಇದೆ ಇಲ್ಲಿ? I cannot understand.

ಶ್ರೀ ಸಿ.ಭೈರೇಗೌಡ(ವೇಮಗಲ್):-ಸ್ವಾಮಿ, ನಮ್ಮ ಕಡೆಯಿಂದ ನಮ್ಮ ನಾಯಕರಾದ, ಮಾನ್ಯ ಸಿಂಧ್ಯಾರವರು, ಸ್ನೇಹಿತರಾದ ಮಾನ್ಯ ಸೋಮಶೇಖರ್‌ರವರು ಅವರ ಆಡಳಿತದ ಅನುಭವದ ಆಧಾರದ ಮೇಲೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತೆ ಈ ಬಗ್ಗೆ ಸಿಬಿಐ ವಿಚಾರಣೆ ಏತಕ್ಕೆ ಆಗಬೇಕೆನ್ನುವುದಕ್ಕೆ ಬಹಳ ಗುರುತರವಾದ ಕಾರಣಗಳನ್ನೂ ಕೂಡ ಕೊಟ್ಟಿದ್ದೇವೆ. ಅಲ್ಲದೆ ಇವತ್ತಿನ ದಿವಸ ಫಾಪಾ ಕಾಗದ ಬಳಕೆಯಲ್ಲಿದೆ, ಶೇಕಡ 40-50ರಷ್ಟು ಮಾತ್ರ ಇವತ್ತು ಬೇರೆ ರೀತಿಯಲ್ಲಿ ರಿಜಿಸ್ಟ್ರೇಷನ್ ಆಗುತ್ತಿದೆ ಎಂಬುದನ್ನು ಮಾನ್ಯ ಕಂದಾಯ ಮಂತ್ರಿಗಳು ಹೇಳಿದ್ದಾರೆ, ಉಳಿದಂತೆ ಇವತ್ತೂ ಕೂಡ ನಕಲಿ ಫಾಪಾ ಕಾಗದಗಳು ಬಳಕೆಯಾಗುತ್ತಿದೆ. ನಾನು ಆಗ್ರಹ ಮಾಡಿದೆ, ಇದನ್ನು ಈ ನಿಮಿಷದಿಂದ ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದರೆ, ಮಾನ್ಯ ಕಂದಾಯ ಮಂತ್ರಿಗಳು ಗಿಳಿ ಪಾಠ ಒಪ್ಪಿಸುತ್ತಾರೆ, ನಾವು ಇಲ್ಲಿ ಗಿಳಿ ಪಾಠ ಕೇಳುವುದಕ್ಕೆ ಬಂದಿಲ್ಲ

ಸ್ವಾಮಿ, ರಾಜ್ಯದ ಬೊಕ್ಕಸಕ್ಕೆ ಹಣ ನಷ್ಟವಾಗುತ್ತಿದೆ, ಇದನ್ನು ಈ ನಿಮಿಷದಿಂದ ತಪ್ಪಿಸಲು ಏನು ಕ್ರಮ ತೆಗೆದುಕೊಂಡಿದ್ದೀರೆಂದರೆ ಅದಕ್ಕೆ ಉತ್ತರವಿಲ್ಲ, ಸ್ಪಷ್ಟವಾದ ನೇರವಾದ ಉತ್ತರವಿಲ್ಲ. ಹಾರಿಕೆ ಉತ್ತರವನ್ನು ಕೊಡುವುದಕ್ಕೆ ಸರ್ಕಾರ ಪ್ರಯತ್ನ ಪಡುತ್ತಿದೆ. ಆದುದರಿಂದ ಇದನ್ನು ಹೇಳಬೇಕಾಗುತ್ತದೆ, ಇದನ್ನು ತಪ್ಪಿಸಬೇಕಾಗುತ್ತದೆ. ಈ ಬಗ್ಗೆ ಸರ್ಕಾರ ಸರಿಯಾದ ಉತ್ತರವನ್ನು ಕೊಟ್ಟಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ):- ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಪ್ರಾರಂಭದಲ್ಲಿ ತಮ್ಮ ಉತ್ತರದಲ್ಲಿ ನಾವು ಯಾವತ್ತೂ ಸಹಿತ ಚರ್ಚೆಗೆ ಸಿದ್ಧವಾಗಿದ್ದೇವೆಂದು ಹೇಳಿದರು. ತಾವು ಆಡಳಿತ ಪಕ್ಷದವರು ಚರ್ಚೆಗೆ ಸಿದ್ದರಿರಲಿಲ್ಲ, ನನ್ನ ಕೊಠಡಿಯಲ್ಲಿ ಕರೆದು ಚರ್ಚೆ ಮಾಡಿದ್ದೇನೆಂದು ಹೇಳಿದಿರಿ. ಇವರು ಆಡಳಿತ ಪಕ್ಷದವರು ಎರಡು ಮಾತುಗಳನ್ನಾಡುತ್ತಾರೆಂಬುದಕ್ಕೆ ಉದಾಹರಣೆಯಾಗಿ ಇದನ್ನು ಹೇಳಬಯಸುತ್ತೇನೆ. ಇದರ ಬಗ್ಗೆ ನಾಲ್ಕು ದಿವಸಗಳ ಕಾಲ ಚರ್ಚೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಯಾವುದೇ ರೀತಿಯಾಗಿ ಮಾನಸಿಕ ಒತ್ತಡಕ್ಕೆ ನಾನು ಒಳಗಾಗಿಲ್ಲವೆಂದು ಹೇಳಿದ್ದಾರೆ, ತಾವು ಹಾಗೆ ಇರಬೇಕು. ರಾಜ್ಯದ ಮುಖ್ಯ ಮಂತ್ರಿಗಳು ಚುನಾವಣೆಯಲ್ಲಿ ಗೆಲ್ಲಲಿ ಅಥವಾ ಸೋಲಲಿ, ಅಥವಾ ಆಡಳಿತ ಪಕ್ಷದಲ್ಲಿ ಈ ರೀತಿಯಾಗಿ ಗೊಂದಲಗಳಾದ ಸಂದರ್ಭದಲ್ಲಿ ತಾವು ಬಹಳ ಶಾಂತಚಿತ್ತವಾಗಿದ್ದರೆ ರಾಜ್ಯದ ಜನತೆಗೆ ಒಳ್ಳೆಯದು. ಅದನ್ನು ನಾನು ಒಪ್ಪುತ್ತೇನೆ ಸ್ವಾಮಿ. ಇದರಲ್ಲಿ ಬಹಳ ದೊಡ್ಡ ಚರ್ಚೆ ಏನೂ ಇಲ್ಲ ಸ್ವಾಮಿ. ನಾವು ಎರಡು ಸ್ಪಷ್ಟವಾದ ವಿಚಾರಗಳನ್ನು ಹೇಳಿದ್ದೇವೆ, ಇದರಲ್ಲಿ ಮಾನ್ಯ ರೋಷನ್ ಬೇಗ್‌ರವರ ರಾಜೀನಾಮೆ ಬಹಳ ಮುಖ್ಯವಾಗಿ ಅಡಕವಾಗಿರುವ ವಿಚಾರ. ನಾನು ಇದರಲ್ಲಿ ರಾಜಕೀಯ ಮಾಡುವುದಕ್ಕೆ ಬಯಸುವುದಿಲ್ಲ. ಮಾನ್ಯ ರೋಷನ್‌ಬೇಗ್‌ರವರು ಮಾನಸಿಕವಾಗಿ ಎಷ್ಟೊಂದು ಹಿಂಸೆಗೆ ಒಳಗಾಗಿದ್ದಾರೆಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ, ಆಡಳಿತ ಪಕ್ಷಕ್ಕೆ ಎಷ್ಟೊಂದು ಮುಜುಗರವಾಗಿದೆ ಎಂಬುದನ್ನೂ ಸಹ ನಾನು ಅರ್ಥ ಮಾಡಿಕೊಂಡಿದ್ದೇನೆ, ಆದರೆ ಬೇರೆ ದಾರಿ ಇಲ್ಲ. ಮಾನ್ಯ ಸೋಮಶೇಖರ್‌ರವರು ಒಂದು ವಿಚಾರವನ್ನು ಹೇಳಿದರು, ನೀವು ಸ್ಟೇಟ್ ಗೌರ್ನಮೆಂಟ್‌ನಿಂದಲೇ ಎನ್‌ಕ್ವೈರಿ ಮಾಡಿಸುತ್ತೇವೆಂದು ಹೇಳುತ್ತೀರಿ, ಸ್ಟೇಟ್ ಗೌರ್ನಮೆಂಟ್ ಎಂದರೇನು? Roshan Baig is part of the State Government. ತಪ್ಪಿತಸ್ಥನೇ ಎನ್‌ಕ್ವೈರಿಯನ್ನೂ ಸಹಿತ ಮಾಡಬೇಕೆಂದು ಹೇಳಿದರೆ ಹೇಗಾಗುತ್ತದೆ? ಆದುದರಿಂದ ದಯವಿಟ್ಟು ಮಾನ್ಯ ರೋಷನ್‌ಬೇಗ್‌ರವರು ರಾಜೀನಾಮೆಯನ್ನು ಕೊಡಬೇಕು. ಇಲ್ಲದಿದ್ದರೆ ಮಾನ್ಯ ಮುಖ್ಯಮಂತ್ರಿಗಳು, ಇವತ್ತು ರಾಜ್ಯದ ಹಿತದೃಷ್ಟಿಯಿಂದಾಗಿ ಈ ಒಂದು ಎನ್‌ಕ್ವೈರಿ ಆಗುವವರೆಗೆ ಅವರನ್ನು ಸಚಿವ ಸಂಪುಟದಿಂದ ಹೊರಗಿಡಬೇಕು. ಮಾನ್ಯ ರೋಷನ್‌ಬೇಗ್‌ರವರಿಗೂ ಅವರ

ತಮ್ಮನಿಗೂ ಯಾವುದೇ ರೀತಿಯ ಸಂಬಂಧವಿಲ್ಲದಿರಬಹುದೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ; ಆದರೆ ಜನ ಒಪ್ಪುವುದಿಲ್ಲ ಸ್ವಾಮಿ. ಇಷ್ಟು ಹೊತ್ತಿಗಾಗಲೇ ಮಾನ್ಯ ರೋಷನ್ ಬೇಗ್‌ರವರು ರಾಜೀನಾಮೆ ಕೊಡಬೇಕಾಗಿತ್ತು. ಅವರು ಗೃಹಮಂತ್ರಿಗಳಾಗಿದ್ದವರು, ಗೃಹ ಇಲಾಖೆಯಲ್ಲಿ ಸಂಪರ್ಕ ಇಟ್ಟುಕೊಂಡಿರುವವರು, ಎನ್‌ಕೌಂಟರಿಯಲ್ಲಿ ಅವರ ಹಸ್ತಕ್ಷೇಪವಾಗುವುದಿಲ್ಲವೆಂದು ಯಾವ ರೀತಿಯಿಂದ ಹೇಳುತ್ತೀರಿ? ಆದುದರಿಂದ ಅವರ ರಾಜೀನಾಮೆಯನ್ನು ನಾವು ಒತ್ತಾಯ ಮಾಡುತ್ತಿದ್ದೇವೆ, ಇದು ಮೊದಲನೆಯದು. ಇನ್ನು ಎರಡನೆಯದಾಗಿ ನಾವು ಏಕೆ ಸಿಬಿಐ ತನಿಖೆಗಾಗಿ ಕೇಳುತ್ತಿದ್ದೇವೆ ಎಂದರೆ, ನೀವು ಈ ಕಡೆ ಕುಳಿತುಕೊಂಡಿದ್ದಾಗ ಹೇಳಿರುವ ಎಲ್ಲಾ ಪ್ರಶ್ನೆಗಳನ್ನು ಹಾಗೂ ಉತ್ತರಗಳನ್ನು ಮರೆತುಬಿಟ್ಟಿದ್ದೀರಿ, ಎಲ್ಲಾ ಬೇಡಿಕೆಗಳನ್ನು ಕೂಡ ಮರೆತಿದ್ದೀರಿ,· ಆದರೆ ನಾನು ಮರೆತಿಲ್ಲ. ನಮ್ಮ ಪೋಲೀಸ್ ಅಧಿಕಾರಿಗಳು ಕೆಳಹಂತದಿಂದ ಹಿಡಿದು ಶ್ರೀಕುಮಾರ್‌ರವರೆಗೆ ಅವರ ಇಂಟಿಗ್ರಿಟಿಯನ್ನು ನಾನು ಕ್ವೆಶ್ಚನ್ ಮಾಡುತ್ತಿಲ್ಲ. ಆದರೆ ಪ್ರಶ್ನೆ ಇರುವುದು, ಟರ್ಮ್ಸ್ ಆಫ್ ರೆಫರೆನ್ಸ್ ಏನಿರುತ್ತದೆಂಬುದು ನಮಗೆಲ್ಲಾ ಅರ್ಥವಾಗುತ್ತದೆ, ಫೈಲ್ ಮೇಲೆ ಏನು ಬರೆಯುತ್ತೇವೆ, ಯಾವುದನ್ನು ಟರ್ಮ್ಸ್ ಆಫ್ ರೆಫರೆನ್ಸ್ ಮಾಡುತ್ತೇವೆ, ಯಾರಿಗೆ ರಜೆ ಮೇಲೆ ಹೋಗೆಂದು ಹೇಳುತ್ತೇವೆ, ಇವೆಲ್ಲಾ ನಮಗೆ ಗೊತ್ತಿದೆ. ಆದುದರಿಂದ ನಾವು ಹೇಳುತ್ತಿರುವುದು, ಇದನ್ನು ಸೆಂಟ್ರಲ್ ಗೌರ್ನಮೆಂಟ್‌ನ ಒಂದು ಏಜೆನ್ಸಿಯಾದ ಸಿಬಿಐಗೆ ಕೊಡಿ, ಇಷ್ಟು ಹೊತ್ತಿಗಾಗಲೇ ಹಣಕಾಸು ಮಂತ್ರಿಗಳ ಜೊತೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಬೇಕಾಗಿತ್ತೆಂದು ನಾನು ಹೇಳಿದೆ, ಈ ವಿಚಾರದಲ್ಲಿ ಕೇಂದ್ರ ಗೃಹ ಸಚಿವರೊಡನೆ ಮಾತನಾಡಬೇಕಾಗಿತ್ತು. ಹತ್ತಾರು ಕೋಟಿ ರೂಪಾಯಿಗಳ ಛಾಪಾ ಕಾಗದ ಇವತ್ತು ರಾಷ್ಟ್ರದಲ್ಲಿ ಚಲಾವಣೆಯಲ್ಲಿದೆ, ಇವರು ಭಯೋತ್ಪಾದಕರಿಗೆ ಕರೀಂಲಾಲಾ ಎಂಬುವವನು ದುಡ್ಡು ಕೊಟ್ಟಿದ್ದಾರೆಂಬ ಆಪಾದನೆ ಇದೆ. ಈ ಮಾತನ್ನು ನಾನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. The Central Government should have intervened by this time. It has also failed. ಆದುದರಿಂದ ಸರ್ಕಾರದ ಉತ್ತರ ನಮಗೆ ಸಮಾಧಾನ ತಂದಿಲ್ಲ, ಇವತ್ತು ನಮ್ಮ ಪಕ್ಷ ಧರಣಿ ಮಾಡಬಾರದೆಂದು ತೀರ್ಮಾನ ಮಾಡಿರುವುದರಿಂದ, ಮುಖ್ಯಮಂತ್ರಿಯವರನ್ನು ಏತಕ್ಕೆ ರೋಶನ್ ಬೇಗ್‌ರವರೇ, ಇಕ್ಕಟ್ಟಿಗೆ ಸಿಕ್ಕಿ ಹಾಕಿಸುತ್ತಿದ್ದೀರಿ? ನೀವು ರಾಜೀನಾಮೆಯನ್ನು ಕೊಡಿ, ಮುಖ್ಯಮಂತ್ರಿಗಳೇ ನೀವು ಏತಕ್ಕೆ ಅವರ ಮುಲಾಜಿಗೆ ಒಳಗಾಗಿದ್ದೀರಿ? ಆರು ತಿಂಗಳಾದ ಮೇಲೆ ಅವರು ವಾಪಸ್ ಬರುತ್ತಾರೆ, ಸಿಬಿಐಗೆ ಕೊಡಿ, ಕೊಟ್ಟರೆ ಏನಾಗುತ್ತದೆ? ನಾವು ಈ ಎರಡೂ ಬೇಡಿಕೆಗಳನ್ನು ತಮ್ಮ ಮುಂದೆ ಇಟ್ಟಿದ್ದೇವೆ. ತಾವು ಒಪ್ಪುತ್ತಿಲ್ಲ. ಅದಕ್ಕೋಸ್ಕರ ನಮ್ಮ ಪಕ್ಷದ ಸದಸ್ಯರುಗಳು, ಸಂಯುಕ್ತ ಜನತಾದಳ, ಜಾತ್ಯಾತೀತ ಜನತಾದಳ ಮತ್ತು ತಟಸ್ಥ ಜನತಾದಳ ಮೂರು ಪಕ್ಷದ ಸದಸ್ಯರುಗಳು

ಪ್ರತಿಭಟನೆಯನ್ನು ಮಾಡಿ ಆಚೆಗೆ ಹೋಗುತ್ತಿದ್ದೇವೆ.

(ಸಂಯುಕ್ತ ಜನತಾದಳ, ಜಾತ್ಯಾತೀತ ಜನತಾದಳ ಹಾಗೂ ತಟಸ್ಥ ಜನತಾದಳ ಸದಸ್ಯರು ಈ ಸಂದರ್ಭದಲ್ಲಿ ಸದನದಿಂದ ಹೊರ ನಡೆದರು)

(ಗೊಂದಲ)

ಅಧ್ಯಕ್ಷರು:- ಮಾನ್ಯ ವಿಶ್ವೇಶ್ವರ ಹೆಗಡೆಯವರೇ, ನಾವು ತಾವು ಹೇಳಿದ ಹಾಗೆ ಅಲೋ ಮಾಡಿದ್ದೇವೆ, ಅದಕ್ಕೆ ಅವರು ಸಮರ್ಥವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಪುನಃ ನಾನು ಈ ಸಬ್‌ಜೆಕ್ಟ್ ತೆಗೆದುಕೊಳ್ಳಲಾಗುವುದಿಲ್ಲ, This subject is over. ದಯವಿಟ್ಟು ತಮ್ಮ ತಮ್ಮ ಆಸನಕ್ಕೆ ತೆರಳುವುದು, ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸುವುದನ್ನು ತೆಗೆದುಕೊಳ್ಳಬೇಕಾಗುತ್ತದೆ, I am sorry, ನೀವು ನಲವತ್ತು ಜನರಿದ್ದೀರಿ ಅವರು ನೂರ ಐವತ್ತು ಜನರಿದ್ದಾರೆ, ನೀವು ನಲವತ್ತು ಜನ ಈ ರೀತಿ ಮಾಡುವುದನ್ನು I don't like this. ಅದಕ್ಕೂ ಮಿತಿ ಇರಬೇಕು, ನಾವು ಎಲ್ಲವನ್ನೂ ಅಲೋ ಮಾಡಿದ್ದೇವೆ, ಅವರು ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿಗೂ ನೀವು ಈ ರೀತಿ ನಿಂತುಕೊಳ್ಳುವುದರಲ್ಲಿ ಅರ್ಥವೇನಿದೆ? I am very sorry. ಅರ್ಡಿನೆನ್ಸ್ ಲೆಜಿಸ್ಲೇಷನ್ ಮಾಡಬೇಕಾಗಿದೆ, ರ್‍ಯಾಟಿಫಿಕೇಷನ್ ಬಿಲ್ ಇದೆ.

(ಈ ಸಂದರ್ಭದಲ್ಲಿ ಸದನದ ಬಾವಿಯಿಂದ ತೆರಳಿ ವಿರೋಧಪಕ್ಷದ ನಾಯಕರು ಮಾತನಾಡಲು ತೊಡಗಿದರು)

ಶ್ರೀ ಜಗದೀಶ ಶೆಟ್ಟರ್:- ಇವತ್ತು ರಾಜ್ಯದ ಬೊಕ್ಕಸಕ್ಕೆ ಹತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಆದಾಯ ಕಡಿಮೆಯಾಗುತ್ತಿದೆ, ಇದರಲ್ಲಿ ಆರ್ಥಿಕ ಭಯೋತ್ಪಾದನೆ ಇದೆ, ಆ ಭಯೋತ್ಪಾದಕರ ಗದ್ದಲ, ದೌರ್ಜನ್ಯ ಬೇರೆ ಇದೆ. ಇವತ್ತು ಈ ಆರ್ಥಿಕ ಭಯೋತ್ಪಾದಕರ ದೌರ್ಜನ್ಯ ಸಮಾಜದ ಮೇಲಾಗುತ್ತಿದೆ, ಇದನ್ನು ತಡೆಯಲು ಸಿಬಿಐಗೆ ತನಿಖೆಗೆ ಕೊಡಬೇಕಾಗುತ್ತದೆ, ಈ ಬಗ್ಗೆ ರಾಜ್ಯ ಸರ್ಕಾರ ಮೀನಮೇಷ ಏತಕ್ಕೆ ಎಣಿಸುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇದರ ಪ್ರಮುಖ ಆರೋಪಿ ಸಚಿವರೊಬ್ಬರ ತಮ್ಮ, ಅವರು ಒಂದು ರಾಜಕೀಯ ಪಕ್ಷದ ಆಫೀಸ್ ಬೇರರ್ ಆಗಿದ್ದಾರೆ. ಇವತ್ತು ಅವರ ಮೇಲೆ ಸಂಶಯದ ಕತ್ತಿ ತೂಗುತ್ತಿದೆ. ಆದ್ದರಿಂದ, ಇದನ್ನು ಸಿ.ಬಿ.ಐ.ಗೆ ಕೊಡದೇ ಬೇರೆ ಅನಿವಾರ್ಯವಿಲ್ಲ.

Mr.SPEAKER:- I cannot compel the government to do like this or like that. I cannot compel them. It is the decision of the government. I cannot compel them. ನಾನು ಮತ್ತೊಮ್ಮೆ ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ತಾವು

ಬುದ್ದಿವಂತರಿದ್ದೀರಿ, ಒಳ್ಳೆಯ ಅನುಭವಸ್ಥರಿದ್ದೀರಿ, ದಯವಿಟ್ಟು ತಮ್ಮ ತಮ್ಮ ಜಾಗಗಳಿಗೆ ಹೋಗಿ ಮುಂದಿನ ಕಾರ್ಯಕಲಾಪಗಳು ಸುಗಮವಾಗಿ ನಡೆಯಲು ಅವಕಾಶ ಮಾಡಿಕೊಡಿ. ಸುಮ್ಮನೆ ಸದನದ ಕಾರ್ಯ ಕಲಾಪವನ್ನು ಮುಂದೂಡುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಅವರು 150 ಜನ ಸದಸ್ಯರಿದ್ದಾರೆ. ಆ 150 ಜನರಿಗೆ ಅನ್ಯಾಯವಾಗುತ್ತಿದೆ. ಅವರಲ್ಲಿ ಎಷ್ಟೋ ಜನ ಪ್ರಶ್ನೆಗಳನ್ನು ಕಳುಹಿಸಿದ್ದಾರೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕು ಎಂದು ನಿಂತಿದ್ದಾರೆ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ(ತಮ್ಮ ಸ್ಥಾನದಿಂದ):- ಇದನ್ನು ಸಿ.ಬಿ.ಐ.-ಗೆ ಕೊಡಲು ಸರ್ಕಾರ ಏಕೆ ಯೋಚನೆ ಮಾಡುತ್ತಿದೆ ಎಂಬುದು ನಮಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು:- ಅವರ ಅವಶ್ಯಕತೆಯಿಲ್ಲ ಎಂದು ಹೇಳಿದ್ದಾರೆ. I cannot take up this issue once again. You please hear me. I will request all the BJP Members including the leader and the depuy leader. No, no. I cannot take up.

(ಗೊಂದಲ)

ಶ್ರೀ ಕೆ.ವಿಶ್ವೇಶ್ವರ ಹೆಗಡೆ:-ರಾಜ್ಯ ಸರ್ಕಾರ ಈ ರೀತಿಯಾದಂಥ ವರ್ತನೆಯಿಂದ ರಾಜ್ಯದ ಮರ್ಯಾದೆಯನ್ನು ಹರಾಜು ಹಾಕುತ್ತಿದೆ. ರಾಜ್ಯದ ಘನತೆ ಗೌರವಗಳನ್ನು ಉಳಿಸಬೇಕಾಗಿದೆ. ಹಾಗಾಗಿ ಇದನ್ನು ಸಿ.ಬಿ.ಐ.ಗೆ ವಹಿಸಬೇಕು ಮತ್ತು ಮಾನ್ಯ ರೋಷನ್‌ಬೇಗ್‌ರವರು ರಾಜೀನಾಮೆ ಕೊಡಲೇಬೇಕು ಎಂದು ಹೇಳುತ್ತಿದ್ದೇವೆ.

ಅಧ್ಯಕ್ಷರು:- 150 ಜನ ಸದಸ್ಯರುಗಳಿಗೆ ಅನ್ಯಾಯವಾಗುತ್ತಿರುವುದನ್ನು ನಾವು ಮನಗಾಣಬೇಕಾಗಿದೆ. ಇದನ್ನು ನೀವು ಅರ್ಥಮಾಡಿಕೊಳ್ಳಬೇಕು. ನಿಮಗಿರುವಷ್ಟೇ ಹಕ್ಕು ಅವರಿಗೂ ಇದೆ. This should not be the attitude of the responsible persons and responsible Members. ನೀವು ಹೇಳಿದ ಹಾಗೆಯೇ ಕೇಳಿದೆವು, ಡಿಸ್ಕಷನ್ ಆಯಿತು, ಅವರೂ ಸಫಿಷಿಯೆಂಟ್ ಆಗಿ ಉತ್ತರವನ್ನು ಕೊಟ್ಟಿದ್ದಾರೆ. It is unfair. It is unfair on the part of the Hon'ble Members.

(ಗೊಂದಲ)

(ಸದನದ ಬಾವಿಯಿಂದ ಬಿ.ಜೆ.ಪಿ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು:- ನಿಮ್ಮ 40 ಜನ ಸದಸ್ಯರಿಂದಾಗಿ, ಆ 150 ಸಫರ್ ಸದಸ್ಯರು ಆಗುತ್ತಿದ್ದಾರೆ. ಅವರು ಮಾತನಾಡಲು ನೀವು ಅಲೋ ಮಾಡುತ್ತಿಲ್ಲ.

(ಆಡಳಿತ ಪಕ್ಷದ ಅನೇಕ ಸದಸ್ಯರು ಏಕಕಾಲದಲ್ಲಿ ಎದ್ದುನಿಂತು ಭಾರತೀಯ ಜನತಾ ಪಕ್ಷದ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗುತ್ತಿದ್ದರು)

(ಗೊಂದಲ)

ಅಧ್ಯಕ್ಷರು:- ಕೆಲವೇ ಸದಸ್ಯರಿಂದ 150 ಜನ ಸದಸ್ಯರಿಗೆ ಅನ್ಯಾಯವಾಗುತ್ತಿರುವುದನ್ನು ನಾನು ನೋಡಲಾರೆ. ಈಗ ನಾನು ಸದನವನ್ನು ಮುಂದೂಡುತ್ತಿದ್ದೇನೆ, ಮತ್ತೆ 2.30ಕ್ಕೆ ಸೇರೋಣ.

(ಸದನವು ಮಧ್ಯಾಹ್ನ 1.25ಕ್ಕೆ ಮುಂದೂಡಲ್ಪಟ್ಟು ಪುನಃ 2.30ಕ್ಕೆ ಸೇರಲು ನಿಶ್ಚಯಿಸಿತು)

(ಸಭಾಧ್ಯಕ್ಷರು ಶ್ರೀ ಎಂ.ವಿ.ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಧರಣಿಯನ್ನು ಮಾಡಲು ಸದನದ ಬಾವಿಗೆ ಬಂದರು)

ನಕಲಿ ಛಾಪಾ ಕಾಗದ ಹಗರಣವನ್ನು ಸಿ.ಬಿ.ಐ. ತನಿಖೆಗೆ ವಹಿಸಲು ಒತ್ತಾಯ ಮತ್ತು ಧರಣಿ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಛಾಪಾ ಕಾಗದದ ವಿಷಯವಾಗಿ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಜನತಾದಳದ ಎಲ್ಲಾ ಬಣಗಳವರು ಬಹಿಷ್ಕಾರ ಮಾಡಿ ಹೊರಗೆ ಹೋಗಿರುತ್ತಾರೆ. ಇದರಲ್ಲಿ ಇವತ್ತು ಸರ್ಕಾರ ಮೊಂಡುತನವನ್ನು ಮಾಡಬಾರದು, ಇವತ್ತಿಗೂ ಕೂಡ ನಕಲಿ ಸ್ಟಾಂಪ್ ಪೇಪರ್ ಮಾರಾಟ ನಡೆಯುತ್ತಿದೆ, ಆ ಜಾಲ ಇನ್ನೂ ಕೆಲಸ ಮಾಡುತ್ತಿದೆ. 40-50 ಜನ ಯುವಕರು ಇವತ್ತು ಇದರಲ್ಲಿ ಮುಂದುವರೆದಿದ್ದಾರೆ. ಇವತ್ತಿಗೂ ಕೂಡ ಅದು ಸ್ಟಾಪ್ ಆಗಿಲ್ಲ, ಸ್ಟಾಪ್ ಮಾಡಿಸುವ ಕೆಲಸ ಇವತ್ತಿನವರೆಗೂ ಸರ್ಕಾರದ ಕಡೆಯಿಂದ ಆಗುತ್ತಿಲ್ಲ. ಇದರ ಮಾಹಿತಿಯನ್ನು ಕೊಟ್ಟಂತಹ ಜಯಂತ ತಿನೇಕರ್ ಏನಿದ್ದಾನೆ 24ನೇ ತಾರೀಖು 11ನೇ ತಿಂಗಳಲ್ಲಿ ಅವರು ಒಂದು ಕಂಪ್ಲೆಂಟ್‌ನ್ನು ಕೊಟ್ಟರು. ಆ ಕಂಪ್ಲೇಂಟ್‌ನಲ್ಲಿ ಆರೋಪಿಗಳ ಹೆಸರಿದ್ದವು, ಆ ಆರೋಪಿಗಳನ್ನು ಇವತ್ತಿನವರೆಗೂ ಅರೆಸ್ಟ್ ಮಾಡಿರುವುದಿಲ್ಲ, ಅವರಲ್ಲಿ ಒಬ್ಬರನ್ನೂ ಕೂಡ ತಂದು ಇನ್‌ವೆಸ್ಟಿಗೇಷನ್ ಮಾಡಿರುವುದಿಲ್ಲ. 23 ಜನರ ಹೆಸರನ್ನು ಹೇಳಲಾಗಿದ್ದು ಇವತ್ತಿನವರೆಗೂ ಅವರ ಮೇಲೆ ಏನೂ ಆಕ್ಷನ್ ಇಲ್ಲ. ಮಾನ್ಯ ರೋಷನ್‌ಬೇಗ್‌ರವರು ಸಾಕಷ್ಟು ಸಲ ಬಾಂಬೆಗೆ ಹೋಗಿ ಬಂದಿದ್ದಾರೆ, ಯಾವ ಉದ್ದೇಶದ ಸಲುವಾಗಿ ಏಕೆ ಹೋಗಿದ್ದರು ಎನ್ನುವುದು

ಇವತ್ತಿನವರೆಗೂ ಇಲ್ಲ. ಇವತ್ತಿಗೂ ಸರ್ಕಾರದ ಕಡೆಯಿಂದ ಸ್ಪಷ್ಟೀಕರಣ ಇಲ್ಲ. ಪೋಲೀಸ್ ಕಮೀಷನರ್ ಸಿಬಿಐ ತನಿಖೆ ಮಾಡಬೇಕೆಂದು ವರದಿಯನ್ನು ಕೊಟ್ಟರು. ಅದರ ಬಗ್ಗೆ ರಾಜ್ಯಸರ್ಕಾರದ ಏನೂ ರೆಸ್ಪಾನ್ಸ್ ಇಲ್ಲ. ಇದರಿಂದ ಏನು ಅರ್ಥವಾಗುತ್ತದೆಂದರೆ, ಅಬ್ದುಲ್ ಕರೀಂಲಾಲಾ ತೆಲಗಿ ಅರೆಸ್ಟ್ ಆದ ಮೇಲೆ ಇವತ್ತು ಕೆಲವೊಂದು ಜನರ ಹೆಸರುಗಳು ಹೊರಗೆ ಬರುತ್ತಿವೆ, ಆ ವ್ಯಕ್ತಿಗಳ ಇನ್‌ವೆಸ್ಟಿಗೇಷನ್ ಹಾಗೂ ಫರ್ದರ್ ಯಾರನ್ನು ಅರೆಸ್ಟ್ ಮಾಡಬೇಕು ಅದು ಆಗುತ್ತಿಲ್ಲ. ಕಳೆದ ವರ್ಷ 12 ಕೋಟಿ ರೂಪಾಯಿಗಳಷ್ಟು ಸ್ಟಾಂಪ್ ಪೇಪರ್ ಸೀಜ್ ಮಾಡಿದರು, ಆಗ ಚಾರ್ಜ್‌ಷೀಟ್ ಹಾಕಿದರು, ನಂತರ ಅಬ್ದುಲ್ ಕರೀಂಲಾಲಾನ ಸ್ಟೇಟ್‌ಮೆಂಟ್ ಮೇಲೆ, ಇದರಲ್ಲಿ ಕೆಲವು ಹಿರಿಯ ಪೋಲೀಸ್ ಅಧಿಕಾರಿಗಳ ಹೆಸರುಗಳು ಬಂದಿವೆ, ಯಾವ ರಾಜಕಾರಣಿಗಳ ಹೆಸರುಗಳು ಬಂದಿದ್ದಾವೆ, ಪ್ರಮುಖ ವ್ಯಕ್ತಿಗಳ ಹೆಸರುಗಳು ಬಂದಿರುವ ಸಂದರ್ಭದಲ್ಲಿ ಚಾರ್ಜ್‌ಷೀಟ್‌ನಲ್ಲಿ ಅವರ ಹೆಸರುಗಳು ಬರಲಿಲ್ಲ. ಹಾಗಾದರೆ ಮೊನ್ನೆ ಮಾನ್ಯ ಖಿರ್ಗಿಯವರು ಇದನ್ನು ಡಿಸ್‌ಕ್ಲೋಸ್ ಮಾಡಬಹುದಾಗಿತ್ತು. ಹಿಂದೆ ಚಾರ್ಜ್‌ಷೀಟ್ ಹಾಕಿದಂಥ ಸಂದರ್ಭದಲ್ಲಿ ಯಾರ್ಯಾರು ಆರೋಪಿಗಳಿದ್ದರು, ಹೊಸದಾಗಿ ಚಾರ್ಜ್‌ಷೀಟ್ ಹಾಕಿದ್ದಾರೋ ಹೇಗೆ? ಹೊಸದಾಗಿ ಎಫ್‌ಐಆರ್ ಕಳುಹಿಸಿದ್ದಾರೋ ಹೇಗೆ? ಅಡಿಷನಲ್ ಕೋರ್ಟಿಗೆ ಏನಾದರೂ ಸಬ್‌ಮಿಷನ್ ಮಾಡಿದ್ದಾರೋ ಹೇಗೆ? ಇದರ ಬಗ್ಗೆ ಅವರು ತಿಳಿಸಬಹುದಾಗಿತ್ತು. ಇವತ್ತಿನವರೆಗೂ ಆ ಡೀಟೇಲ್ಸ್ ಹೊರಗಡೆ ಬರಲಿಲ್ಲ. ಕರೀಂಲಾಲಾ ಅರೆಸ್ಟ್ ಆದಮೇಲೆ, ಪೋಲೀಸ್ ಕಮೀಷನರ್ ಅವನನ್ನು ಇನ್‌ವೆಸ್ಟಿಗೇಷನ್ ಮಾಡಿದ ಮೇಲೆ, ಅವನ ಸ್ಟೇಟ್‌ಮೆಂಟ್ ತೆಗೆದುಕೊಂಡ ಮೇಲೆ ಅವನ ಮಾಹಿತಿ ಬಗ್ಗೆ ಸ್ಟೇಟ್‌ಮೆಂಟ್ ಟೇಪ್ ರೆಕಾರ್ಡ್‌ನಲ್ಲಿದೆ. ವೀಡಿಯೋದಲ್ಲಿ ಅವನ ಸ್ಟೇಟ್‌ಮೆಂಟ್ ರೆಕಾರ್ಡ್ ಮಾಡಿಕೊಂಡಿದ್ದಾರೆ. ಪ್ರಮುಖ ರಾಜಕೀಯ ವ್ಯಕ್ತಿಗಳ ಹೆಸರುಗಳು ಬಂದಿವೆ, ಅವರ ಮೇಲೆ ಏನೂ ಇನ್‌ವೆಸ್ಟಿಗೇಷನ್ ಆಗುತ್ತಿಲ್ಲ. ಏನು ಎನ್‌ಕ್ವೈರಿ ಆಗುತ್ತಿಲ್ಲ. ಸರ್ಕಾರ ಯಾರನ್ನೋ ರಕ್ಷಣೆ ಮಾಡಲಿಕ್ಕೆ, ಪ್ರಮುಖ ಮಂತ್ರಿಗಳನ್ನು ರಕ್ಷಣೆ ಮಾಡಲಿಕ್ಕೆ ಅಧಿಕಾರಿಗಳನ್ನು ರಕ್ಷಣೆ ಮಾಡಲಿಕ್ಕೆ, ರಾಜ್ಯ ಸರ್ಕಾರ ಹೋಗುತ್ತಿದೆ. ಪ್ಯೆಮಾಫೇಸಿ ಕೇಸ್ ಆಗಿರುವಂಥಾದ್ದು ಇದು, ಇದರ ಬಗ್ಗೆ ಇನ್‌ವೆಸ್ಟಿಗೇಷನ್ ಆಗಬೇಕಾದರೆ, ಬೇರೆ ಬೇರೆ ರಾಜ್ಯಗಳಲ್ಲಿ ಕೂಡ ಈ ಪ್ರಕರಣ ಇರುವುದರಿಂದ, ಇದರ ಬಗ್ಗೆ ನಿಷ್ಪಕ್ಷಪಾತವಾದ ತನಿಖೆಯಾಗಬೇಕಾದರೆ ಇದನ್ನು ಸಿಬಿಐ ಇನ್‌ವೆಸ್ಟಿಗೇಷನ್‌ಗೆ ಕೊಡಬೇಕು. ಅದನ್ನು ಬಿಟ್ಟು ಬೇರೆ ದಾರಿಯೇ ಇಲ್ಲ. ಇನ್‌ವೆಸ್ಟಿಗೇಷನ್ ಆಗುವವರೆಗೂ ಮಾನ್ಯ ರೋಷನ್‌ಬೇಗ್‌ರವರು ರಾಜೀನಾಮೆ ಕೊಟ್ಟು ಹೊರಗಡೆ ಬರಬೇಕಾಗುತ್ತದೆ. ಅವರು ಇದರಲ್ಲಿ ನಿರಪರಾಧಿ ಎನ್ನುವುದನ್ನು ತೋರಿಸಬೇಕಾಗುತ್ತದೆ. ಸಂಶಯದ ಕತ್ತಿ ಅವರ ಮೇಲೆ ತೂಗಾಡುತ್ತಿದೆ. ಇದರಲ್ಲಿ ನಾಳೆ ರಾಜ್ಯ ಸರ್ಕಾರದ ಅಳಿವು ಉಳಿವಿನ ಪ್ರಶ್ನೆ ಬರುತ್ತದೆ. ಇದರಲ್ಲಿ 10-20 ಕೋಟಿ

ರೂಪಾಯಿಗಳದ್ದು ಅಲ್ಲ, ಇದರಲ್ಲಿ 10 ಸಾವಿರ ಕೋಟಿ ರೂಪಾಯಿಗಳ ಒಂದು ಇನ್‌ವಾಲ್ವ್‌ಮೆಂಟ್ ಇರುವುದರಿಂದ, ಆರ್ಥಿಕ ಭಯೋತ್ಪಾದಕತೆ ಇಲ್ಲಿ ಇರುವುದರಿಂದ, ದೇಶದ್ರೋಹ ಮಾಡುವಂಥ ವ್ಯಕ್ತಿಗಳಿಗೆ ಈ ಹಣ ಹೋಗುತ್ತಿದೆ ಎನ್ನುವುದು ಹಲವಾರು ಕಡೆ ಇವತ್ತು ಹಲವಾರು ಕಡೆ ಹೊರಗೆ ಬಂದಿರುವುದರಿಂದ ಇದರ ಬಗ್ಗೆ ಕೂಲಂಕಷವಾದ ತನಿಖೆ ಇವತ್ತು ಆಗಬೇಕಾಗುತ್ತದೆ. ಇದು ಸಿಬಿಐ-ಯಿಂದ ಮಾತ್ರ ಸಾಧ್ಯವೇ ಹೊರತು ಬೇರೆ ಯಾರ ಕಡೆಯಿಂದ ಇದು ಸಾಧ್ಯವಿಲ್ಲ. ಆದ್ದರಿಂದ ಇದರ ಬಗ್ಗೆ ರಾಜ್ಯ ಸರ್ಕಾರ ಮೊಂಡುತನವನ್ನು ಮಾಡಬಾರದು. ಮೊಂಡುತನವನ್ನು ಮಾಡದೆ ಇದರ ಬಗ್ಗೆ ಸಿಬಿಐ ತನಿಖೆಗೆ ಕೊಡಬೇಕೆನ್ನುವ ನಮ್ಮ ಬೇಡಿಕೆ ಏನಿದೆ ಅದಕ್ಕೆ ತಕ್ಷಣ ಒಪ್ಪಿಕೊಳ್ಳಬೇಕು. ಜನ ಕೂಡ ಇದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಕ್ಲಿಯರೆನ್ಸ್ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಇದರಲ್ಲಿ ಯಾರೇ ದೊಡ್ಡ ವ್ಯಕ್ತಿಗಳು ಇದ್ದರೂ ಕೂಡ ಅದನ್ನು ನಾನು ತನಿಖೆ ಮಾಡುವುದಕ್ಕೆ ತಯಾರಾಗಿದ್ದೇನೆ ಮತ್ತು ಸಿಬಿಐ-ಗೆ ಕೊಡುವುದರ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎನ್ನುವ ಹೇಳಿಕೆ ಅವರಿಂದ ಬಂದ ಮೇಲೆ ಕೂಡ ಇವತ್ತಿನವರೆಗೂ ರಾಜ್ಯ ಸರ್ಕಾರ ಹಿಂದೇಟು ಹಾಕುತ್ತಿದೆ ಎಂದರೆ, ಇದರಲ್ಲಿ ಯಾರನ್ನೋ ರಕ್ಷಣೆ ಮಾಡುವುದಕ್ಕೆ ರಾಜ್ಯ ಸರ್ಕಾರ ಹೊರಟಿರುತ್ತದೆ. ತಪ್ಪಿತಸ್ಥರನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದೆ, ಏಕೆಂದರೆ ದೇಶದಲ್ಲಿ ಇವತ್ತು ಭಯೋತ್ಪಾದನೆಯ ಹಾಗೂ ಅರಾಜಕತೆಯ ಹಾವಳಿ ಇದೆ. ಭಟ್ಕಳದಂಥ ಪ್ರದೇಶದಲ್ಲಿ ಇವತ್ತು ಜನ ದೇಶದ್ರೋಹದ ಕೆಲಸವನ್ನು ಮಾಡುತ್ತಿದ್ದಾರೆ. ಭಟ್ಕಳದ ಬಗ್ಗೆ ಹಿಂದೆ ಕಮೀಷನ್ ಮಾಡಿದರು, ಇದರ ಬಗ್ಗೆ ಮಾನ್ಯ ಖರ್ಗೆಯವರು ಮಾತನಾಡಿದರು, ಡಾ॥ಚಿತ್ತರಂಜನ್‌ರವರ ಹತ್ಯೆಯಾಯಿತು, ಹತ್ಯೆಯಾಗುವುದಕ್ಕೆ ಉಗ್ರಗಾಮಿಗಳು ಕಾರಣ, ಇವತ್ತಿನವರೆಗೂ ಅವರು ಸಿಗುತ್ತಿಲ್ಲ. ಹೀಗಾಗಿ ದೇಶದ್ರೋಹದ ಚಟುವಟಿಕೆ ನಡೆಯುತ್ತಿದೆ. ನಾನು ಒಂದು ಸಬ್‌ಮಿಷನ್ ಮಾಡುತ್ತೇನೆ, ಡಾ॥ಚಿತ್ತರಂಜನ್‌ರವರ ಹತ್ಯೆಯಾಯಿತು, ತನಿಖೆಯ ಬಗ್ಗೆ ಒಂದು ಆಯೋಗ ನೇಮಕ ಮಾಡಲಾಗಿತ್ತು, ಆ ಆಯೋಗದ ವರದಿ ಸರ್ಕಾರದ ಕೈವಶದಲ್ಲಿದ್ದರೂ ಇವತ್ತಿನವರೆಗೂ ಸರ್ಕಾರ ಸದನಕ್ಕೆ ಅದನ್ನು ಮಂಡನೆ ಮಾಡಲಿಲ್ಲ. ಆಯೋಗದ ವರದಿಯನ್ನು ಕೊಡಬೇಕಾಗಿತ್ತು, ನನಗೆ ತಿಳಿದಿರುವ ಮಾಹಿತಿ ಪ್ರಕಾರ, ಆ ಆಯೋಗದ ವರದಿಯಲ್ಲಿ ದೇಶದ್ರೋಹದ ಚಟುವಟಿಕೆಯನ್ನು ಮಾಡುವಂಥ ವ್ಯಕ್ತಿಗಳ ಹೆಸರುಗಳು ಇವೆ. ಆ ಒಂದು ಗುಂಪುಗಳ ಹೆಸರುಗಳು ಇವೆ. ಹೀಗಾಗಿ ರಾಜ್ಯಸರ್ಕಾರ ಆ ಆಯೋಗದ ವರದಿಯನ್ನು ಮಂಡನೆ ಮಾಡಲಿಲ್ಲ. ರಾಜ್ಯ ಸರ್ಕಾರ ನಡೆದುಕೊಳ್ಳುವ ರೀತಿನೀತಿ ನೋಡಿದರೆ ದೇಶದ್ರೋಹಿ ಚಟುವಟಿಕೆಗಳಿಗೆ ಹೆಚ್ಚು ಕುಮ್ಮಕ್ಕು ಕೊಡುವ ಕೆಲಸ ಇವತ್ತು ನಡೆಯುತ್ತಿದೆ. ಇದಕ್ಕೆ ಮೀನಮೇಷ ಮಾಡದೆ, ಹಠಮಾಡದೆ, ಮೊಂಡುತನವನ್ನು ಮಾಡದೆ, ಇದರಲ್ಲಿ ರಾಜ್ಯ ಸರ್ಕಾರ ನಿರಪರಾಧಿ ಇದ್ದೇವೆ ನಮ್ಮ ಮಂತ್ರಿಗಳು ನಿರಪರಾಧಿ

ಇದ್ದಾರೆ, ನಾವು ಎಲ್ಲಾ ರೀತಿಯ ತನಿಖೆಗೆ ರೆಡಿ ಇದ್ದೇವೆ ಎನ್ನುವ ಮಾತನ್ನು ಹೇಳಿದರೆ ನಾವು ಪ್ರಶಂಸೆ ಮಾಡುತ್ತಿದ್ದೆವು. ಯಾವಾಗಲೂ ಇವರು ಪಾರದರ್ಶಕತೆಯ ಆಡಳಿತ ಕೊಡುತ್ತೇವೆಂದು ಹೇಳುತ್ತಾರೆ. ದೊಡ್ಡ ಪ್ರಮಾಣದ ಭ್ರಷ್ಟಾಚಾರ ಹೊರಗಡೆ ಬಂದಿರುವ ಸಂದರ್ಭದಲ್ಲಿ ಇದರಲ್ಲಿ ಪ್ರಮುಖ ರಾಜಕೀಯ ವ್ಯಕ್ತಿಗಳ ಹೆಸರುಗಳು ಹೊರಗೆ ಬಂದಿರುವ ಸಂದರ್ಭದಲ್ಲಿ ರಾಜ್ಯ ಸರ್ಕಾರ ಮೀನಮೇಷ ಮಾಡುವುದರ ಅವಶ್ಯಕತೆ ಇರಲಿಲ್ಲ. ರಾಜ್ಯಸರ್ಕಾರದಿಂದ ಇದರ ಬಗ್ಗೆ ಕಪ್ಪುಚುಕ್ಕೆ ಮೂಡುವುದು ಬೇಡ, ಸಿಬಿಐ ತನಿಖೆಗೆ ಕೊಟ್ಟು ಬಿಡಬಹುದಾಗಿತ್ತು. ವಿರೋಧ ಪಕ್ಷದವರು ಒತ್ತಾಯ ಮಾಡುವ ಮುಂಚೆ ವಾಲೆಂಟರಿಯಾಗಿ ಕೊಡಬಹುದಾಗಿತ್ತು. ನೀವು ಏಕೆ ಕಿರಿಕಿರಿ ಮಾಡುತ್ತೀರಿ ಎನ್ನುವುದು ಗೊತ್ತಾಗುತ್ತದೆ, ಇದರ ಬಗ್ಗೆ ಶಾಸಕರು ಯಾರೂ ಮಾತನಾಡುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕವಾಗಿ ನಾನು ಇವತ್ತು ಒತ್ತಾಯವನ್ನು ಮಾಡುತ್ತಿದ್ದೇನೆ, ತಾವು ದಯಮಾಡಿ ಸರ್ಕಾರದ ಮೇಲೆ ಒತ್ತಡವನ್ನು ತರಬೇಕು, ರಾಜ್ಯ ಸರ್ಕಾರ ಇದರ ಮಹತ್ವವನ್ನು ಅರಿತು ಇವತ್ತು ಮಾನ್ಯ ಖರ್ಗೆಯವರು ಇಲ್ಲಿಯೇ ಇದ್ದಾರೆ, ಇದರ ಬಗ್ಗೆ ತಕ್ಷಣ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಸಿಬಿಐ ತನಿಖೆಗೆ ತಕ್ಷಣ ಒಂದು ಆಜ್ಞೆಯನ್ನು ಮಾಡಿದರೆ, ರಾಜ್ಯ ಸರ್ಕಾರದಿಂದ ಇದೊಂದು ಒಳ್ಳೆಯದಾಗುತ್ತದೆ. ರಾಜ್ಯ ಸರ್ಕಾರಕ್ಕೂ ಕೂಡ ಒಂದು ಗೌರವ ಬರುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಖರ್ಗೆಯವರಾಗಲಿ, ಮಾನ್ಯ ಮುಖ್ಯಮಂತ್ರಿಗಳಾಗಲಿ, ಇದರ ಬಗ್ಗೆ ಮತ್ತೆ ಪರಿಶೀಲನೆ ಮಾಡಿ, ಇದರ ಬಗ್ಗೆ ನಿಮ್ಮ ಸಚಿವ ಸಂಪುಟದವರು ಕೂಡಿಕೊಂಡು ಡಿಸ್‌ಕಸ್ ಮಾಡಿ, ಇದರ ಮಹತ್ವ ಅರಿತು ಇದನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು. ಇದರ ಬಗ್ಗೆ ಸರ್ಕಾರದಿಂದ ಒಂದು ನಿರ್ಣಯ ಬರಲಿ ಎಂದು ನಾನು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ನಾವು ಮತ್ತೆ ಆರು ತಿಂಗಳ ನಂತರ ಇವತ್ತು ಸದನ ಸೇರಿದ್ದೇವೆ. ಸದನದ ಕಾರ್ಯಕಲಾಪಗಳು ನಡೆಯುವುದು ಇದೆ ಈ ತಿಂಗಳ 31ನೇ ತಾರೀಖಿನವರೆಗೆ ಮಾತ್ರ. ಸದಸ್ಯರಾದ ನಮಗೆ ನಿಮ್ಮ ಭಾವನೆಗಳು ಏನು ಎನ್ನುವುದು, ಈ ಸದನದಲ್ಲಿ ಕಾರ್ಯಕಲಾಪಗಳನ್ನು ಸಂಪೂರ್ಣವಾಗಿ ಪೂರ್ಣಗೊಳಿಸಬೇಕೆಂದಿದೆ. ನಮ್ಮ ಧರಣಿಯಿಂದ ಪೂರ್ಣಗೊಳಿಸುವುದಕ್ಕೆ ನಿಮಗೆ ಅಡ್ಡಿಯಾಗಬಹುದು. ಸರ್ಕಾರ ಸದನವನ್ನು ಹೆಚ್ಚು ದಿನ ನಡೆಸುವಂತೆ ಮಾಡಿದ್ದರೆ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಏನೂ ತೊಂದರೆಯಾಗುತ್ತಿರಲಿಲ್ಲ. ಕಾಟಾಚಾರಕ್ಕೆ ಸದನ ಕರೆದು ಮುಗಿಸುವುದಕ್ಕೆ ಮಾಡುತ್ತಿದ್ದಾರೆ, ಅವರು ಮಾಡಲಿ, ಇದರ ಬಗ್ಗೆ ಜನ ತೀರ್ಮಾನ ಮಾಡುತ್ತಾರೆ, ಅದು ಬೇರೆ ಪ್ರಶ್ನೆ

ಅಧ್ಯಕ್ಷರು:- ನೀವು ನಮಗೆ ಸಹಕಾರವನ್ನು ಕೊಡಬೇಕು. ತಾವು ಕಾಟಾಚಾರಕ್ಕೆ

ಎನ್ನುವ ಮಾತನ್ನು ಹೇಳಿದಿರಿ. ಹೋದವರ್ಷ ಅಖಿಲ ಭಾರತ ಮಟ್ಟದಲ್ಲಿ ಕರ್ನಾಟಕ ರಾಜ್ಯ 48 ದಿವಸ ವರ್ಕಿಂಗ್‌ಡೇಸ್ ಮಾಡಿದೆ. 54 ದಿವಸ ಮಾಡಿ ಮಧ್ಯಪ್ರದೇಶ ಮೊದಲನೆಯ ಸ್ಥಾನದಲ್ಲಿದೆ, 50 ದಿವಸ ವೆಸ್ಟ್‌ಬೆಂಗಾಲ್, ನಮ್ಮದು ಮೂರನೆಯ ಸ್ಥಾನದಲ್ಲಿರುತ್ತದೆ. ಕಾಟಾಚಾರಕ್ಕೆ ಎಂದು ಹೇಳುವುದಕ್ಕಾಗುವುದಿಲ್ಲ. 100 ದಿವಸ ಮಾಡುತ್ತೇವೆ ಎಂದು ಹೇಳಿದ್ದು ಇದೆ, ಅದನ್ನು ರೂಲ್ಸ್ ಕಮಿಟಿಯಲ್ಲಿ ಅಡಾಪ್ಟ್ ಮಾಡಬೇಕು. ಕಮಿಟಿ ಮಾಡುತ್ತಿದ್ದೇವೆ, ಅದರಲ್ಲಿ ಅವರು ಏನುಏನು ಮಾಡಬೇಕು ಎಂಬುದನ್ನು ನೋಡಿ ಹೆಚ್ಚು ಕಡಿಮೆ ಹೇಳುತ್ತಾರೆ. ಡೆಲ್ಲಿನಲ್ಲಿ ಅಂದರೆ ಲೋಕ ಸಭೆಯಲ್ಲಿ ಬಾವಿಯಲ್ಲಿ ಬರಕೂಡದು ಎಂದು ಮಾಡಿದ ಮರುದಿವಸವೇ ಆ ರೂಲ್ಸ್‌ನ್ನು ಅಡಾಪ್ಟ್ ಮಾಡಿಕೊಂಡರು. ಅದನ್ನು ಇನ್ನೂ ಇಲ್ಲಿ ಅಡಾಪ್ಟ್ ಮಾಡಿಕೊಂಡಿರುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅಲ್ಲಿ ಅಡಾಪ್ಟ್ ಮಾಡಿಕೊಂಡ ಮರುದಿವಸವೇ ಏನಾಯಿತು ಎನ್ನುವುದರ ಬಗ್ಗೆ ನಾವೆಲ್ಲಾ ನೋಡಿದ್ದೇವೆ. ತಮ್ಮಲ್ಲಿ ನನ್ನ ಒಂದು ವಿನಂತಿ ಏನೆಂದರೆ, ಇದರ ಬಗ್ಗೆ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿರುತ್ತೀರಿ, ಇದರ ಬಗ್ಗೆ ಚರ್ಚೆಯಾಗಿರುವುದಕ್ಕೆ ಜನಗಳಿಗೆ ಒಂದು ಸಂತೋಷವಾಗಿದೆ. ಇದನ್ನು ಸರ್ಕಾರ ಸಿ.ಬಿ.ಐ.ಗೆ ವಹಿಸಿಕೊಡುತ್ತದೆಯೇ, ಮಾನ್ಯ ರೋಷನ್‌ಬೇಗ್ ಅವರನ್ನು ಸಚಿವ ಸಂಪುಟದಿಂದ ಕೈಬಿಡುತ್ತದೆಯೇ ಎಂದು ಜನ ಕಾತರದಿಂದ ಕಾಯುತ್ತಿದ್ದಾರೆ. ಇವತ್ತು ರಾಜ್ಯದ ಜನತೆ ಈ ಎರಡು ವಿಷಯಗಳ ಬಗ್ಗೆ ಸರ್ಕಾರ ಏನು ಮಾಡುತ್ತದೆ ಎಂದು ಕಾತುರದಿಂದ ನೋಡುತ್ತಿದೆ. ಇಂತಹ ಸಂದರ್ಭದಲ್ಲಿ ನಾವು ಈ ಸದನದಲ್ಲಿ ರಾಜ್ಯದ ಐದು ಕೋಟಿ ಜನರ ಪರವಾಗಿ ಇರುವಾಗ ಅವರ ಭಾವನೆಗಳು ಏನಿವೆ, ಅದಕ್ಕೆ ತಕ್ಕಂತೆ ಸ್ಪಂದಿಸಬೇಕಾದದ್ದು ವಿರೋಧಪಕ್ಷದ ಸದಸ್ಯರಾದ ನಮ್ಮ ಜವಾಬ್ದಾರಿ ಇದೆ.

ಅಧ್ಯಕ್ಷರು:- ಐದು ಕೋಟಿ ಜನರಲ್ಲಿ ನೀವು 150 ಜನ ಸದಸ್ಯರು ಮಾತನಾಡುವುದಕ್ಕೆ ಅಲೋ ಮಾಡುತ್ತಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಒಳಗೆ ಏನೇನಿದೆ ಎಂದು ಹೇಳುವುದಕ್ಕೆ ಆಗುತ್ತದೆಯೇ? ಅವರ ಕಷ್ಟ ಅವರಿಗೇ ಗೊತ್ತು. ಅವರಿಗೆ ಒಳಗೊಳಗೇ ಬಹಳ ನೋವಿದೆ. ಅಲ್ಲಿ ಏನೇನು ಇದೆ ಎನ್ನುವುದು ತಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಆದರೆ ಇದು ರಾಜ್ಯದ ಘನತೆ ಗೌರವದ ಪ್ರಶ್ನೆ. ನಮ್ಮ ರಾಜ್ಯ ಐ.ಟಿ.ಯೊಳಗೆ ಪ್ರಸಿದ್ಧವಾಗಿದೆ, ಎಲ್ಲಾ ದೇಶಗಳ ಪ್ರಧಾನಮಂತ್ರಿಗಳು, ಎಲ್ಲರೂ ಬಂದು ಹೋಗುತ್ತಿದ್ದಾರೆ. ಇದು ಶ್ರೀಗಂಧದ ನಾಡು, ರೇಷ್ಮೆಯ ಬೀಡು ಎಂದು ಪ್ರಸಿದ್ಧಿಯನ್ನು ಪಡೆದಿದೆ. ಆದರೆ ಇಂತಹ ರಾಜ್ಯದಲ್ಲಿ ಈರೀತಿ ಛಾಪಾ ಕಾಗದದ ಹಗರಣವಾಗಿ ನಮ್ಮ ರಾಜ್ಯದ ಜನ ತಲೆತಗ್ಗಿಸುವಂತೆ ಆಗುತ್ತಿರುವುದು ಇದು ಯಾರಿಗೂ ಶೋಭೆಯನ್ನು

ತರುವಂಥಾದ್ದು ಅಲ್ಲ. ಹೀಗಾಗಿ ಈ ರಾಜ್ಯದ ಜನತೆ ಈ ಆರೋಪದಿಂದ ಹೊರಬರಬೇಕು, ದೇಶದೆದುರಿಗೆ ಕರ್ನಾಟಕದವರು ತಲೆಯೆತ್ತಿ ನಿಲ್ಲುವಂತೆ ಆಗಬೇಕು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಸರ್ಕಾರ ನಿಷ್ಪಕ್ಷಪಾತದಿಂದ ಇಲ್ಲಿ ನಡೆದುಕೊಳ್ಳುತ್ತಿದೆ, ಯಾವುದೇ ಆರೋಪ ಬಂದರೂ ಸಹ ಅದನ್ನು ಎದುರಿಸಿ ಸಮರ್ಥವಾಗಿ ತನಿಖೆ ಮಾಡುವುದಕ್ಕೆ ಸಿದ್ಧವಾಗಿದೆ ಎನ್ನುವಂಥ ಸಂದೇಶ ಈ ಸದನದಿಂದ ಹೋಗಬೇಕು. ಇದು ಕರ್ನಾಟಕ ರಾಜ್ಯದ ಮರ್ಯಾದೆಯ ಪ್ರಶ್ನೆ ಇದೆ.

ಅಧ್ಯಕ್ಷರು:- ನೀವು ಹೇಳಿದ್ದೀರಿ. ನಿಮ್ಮ ನಾಯಕರು ಮತ್ತು ಇನ್ನಿತರರು ಈ ವಿಷಯವನ್ನು ಹೇಳಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಪ್ರವಾಸೋದ್ಯಮ ಸಚಿವರಾದ ಮಾನ್ಯ ರೋಷನ್‌ಬೇಗ್ ಅವರು ಕರೀಂಲಾಲಾ ಭೇಟಿಗೆ ಬಾಂಬೆ ಪ್ರವಾಸವನ್ನೂ ಮಾಡಿದ್ದಾರೆ....

(ಗೊಂದಲ)

ಅಧ್ಯಕ್ಷರು:-ಅದೆಲ್ಲ ರಿಪಿಟೇಷನ್ ಬೇಡ.

ಶ್ರೀ ಅಪ್ಪಾಜಿ ಎಸ್. ನಾಡಗೌಡ:- ಮಾನ್ಯ ಸಭಾಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ತಾವು ಈ ಸಭೆಯ ಎಲ್ಲರಿಗೂ ಸುತ್ತೋಲೆಯನ್ನು ಕಳಿಸಿದ್ದೀರಿ. ಕೇಂದ್ರ ಸರ್ಕಾರದಲ್ಲಿ ಇರುವಂಥ ನಮ್ಮ ಸಂಸದೀಯ ವ್ಯವಹಾರಗಳ ಮಂತ್ರಿಗಳು, ಪ್ರಧಾನಮಂತ್ರಿಗಳು, ಅಲ್ಲಿಯ ಲೋಕಸಭೆಯ ಸ್ಪೀಕರ್ ಮತ್ತು ಎಲ್ಲರೂ ಸೇರಿ ಒಂದು ಸಭೆಯನ್ನು ಕರೆದರು, ಕಾನ್‌ಫರೆನ್ಸ್‌ನ್ನು ಮಾಡಿದ್ದರು. ಅದರ ಬಗ್ಗೆ ತಾವು ಈಗಾಗಲೇ ಎಲ್ಲರಿಗೂ ಸುತ್ತೋಲೆಯನ್ನು ಕಳುಹಿಸಿದ್ದೀರಿ. ಕಳೆದವರ್ಷ ನವೆಂಬರ್ 25ರಂದು ನಡೆದಿದ್ದ ಸಭೆಯಿದು. ಅಲ್ಲಿ ಕೆಲವು ನಿಯಮಗಳಿಗೆ ಎಲ್ಲರೂ ಬದ್ಧರಾಗಿರಬೇಕು, ಸಂಸದೀಯ ವ್ಯವಹಾರಗಳನ್ನು ಯಾವ ರೀತಿ ನಡೆಸಿಕೊಡಬೇಕು ಎನ್ನುವುದರ ಬಗ್ಗೆ ಒಂದು ದಿವಸಕಾಲ ಚರ್ಚೆಯಾಗಿ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದ್ದಾರೆ. ಸುದೈವದಿಂದ ಪಾರ್ಲಿಮೆಂಟ್‌ನಲ್ಲಿ ಕೂಡಲೇ ಅದನ್ನು ಇಂಪ್ಲಿಮೆಂಟ್ ಮಾಡಿ ರೂಲ್ಸ್‌ನ್ನು ತಿದ್ದುಪಡಿ ಮಾಡಿ, ಯಾರು ಬಾವಿಗೆ ಬಿದ್ದು ಅತಂತ್ರ ಮಾಡುತ್ತಾರೆ, ಅಡ್ಡಿ ತರುತ್ತಾರೆ, ಅವರಿಗೆ ಒಂದು ದಿವಸ ಸಿಟ್ಟಿಂಗ್ ಫೀಸ್‌ನ್ನು ಕೊಡಬಾರದು ಮತ್ತು ಅವರನ್ನು ಸದನದ ಕಾರ್ಯ ಕಲಾಪದಿಂದ ಹೊರಗೆ ಹಾಕಬೇಕೆಂದು ನಿರ್ಣಯವನ್ನು ಕೂಡ ಕೈಗೊಂಡರು. ಅದನ್ನು

ಮಾಡಿದಂಥವರು ಬಿ.ಜೆ.ಪಿ. ಪಕ್ಷದ ಮುಖಂಡರುಗಳೇ. ಅವರೇ ಮಾಡಿದ ಆ ಶಿಸ್ತು ನಿರ್ಣಯದ ಪಾಲನೆಯನ್ನು ನೀವು ಇಲ್ಲಿ ಮಾಡದೇ ಇದ್ದರೆ ಬಹುತೇಕ ನಾವು ಏನು ಸಂದೇಶವನ್ನು ಜನತೆಗೆ ಕೊಡುತ್ತಿದ್ದೇವೆ? ಗುಲ್ಬರ್ಗಾದಲ್ಲಿ ಆಲಿಕಲ್ಲು ಮಳೆಯಾಗಿ ಕೋಟ್ಯಾಂತರ ರೂಪಾಯಿಗಳಷ್ಟು ರೈತರಿಗೆ ಹಾನಿಯಾಗಿದೆ, ಇವತ್ತು ವಿದ್ಯುತ್ತಿನ ಸಮಸ್ಯೆ ಇದೆ, ಕುಡಿಯುವ ನೀರಿನ ಸಮಸ್ಯೆ ಇದೆ. ಬೇಕಾದಷ್ಟು ಅಪಘಾತಗಳು ಆಗಿವೆ. ಇಂಥಾದ್ದರಲ್ಲಿ ಸರ್ಕಾರ ಸಮರ್ಪಕವಾದಂಥ ಉತ್ತರವನ್ನು ಕೊಟ್ಟಾಗಲೂ ಕೂಡ ಇವರು ಇದೇ ರೀತಿಯಾಗಿ ಧರಣಿಯನ್ನು ಮುಂದುವರೆಸಿಕೊಂಡು ಹೋದರೆ, ಶಿಸ್ತುಪಾಲನೆ ಮಾಡತಕ್ಕಂಥ ಕಾರ್ಯಕ್ರಮವನ್ನು ನಾವು ಮಾಡದೇ ಇದ್ದರೆ, ಬಹುತೇಕ ನನಗನ್ನಿಸುತ್ತದೆ, ಇವರಿಗೆ ರಾಜ್ಯಾಂಗ ವ್ಯವಸ್ಥೆ ಮೇಲೆ ನಂಬಿಕೆ, ವಿಶ್ವಾಸ ಇಲ್ಲದೇ ಇದ್ದರೆ ನಾಳೆ ತಾವೆಲ್ಲರೂ ಲೇಜಿಸ್ಲೇಟರ್ಸ್ ಆಗಿ ಆರಿಸಿ ಬರಬೇಡಿ, ದಯವಿಟ್ಟು ಲೋಕಸಭೆಗೆ ತಾವು ಹೋಗಿ. ರಾಜ್ಯಾಂಗ ವ್ಯವಸ್ಥೆಯಲ್ಲಿ ನಿಮಗೆ ನಂಬಿಕೆ ಇಲ್ಲದಿದ್ದರೆ ಕೇಂದ್ರಸರ್ಕಾರಕ್ಕೆ ಹೋಗಿ.....

(ಗೊಂದಲ)

ಅಧ್ಯಕ್ಷರು:- ನೀವು ಮಾತನಾಡುವಾಗ ಅವರು ಗಲಾಟೆ ಮಾಡಿದ್ದಾರಾ? ಸುಮ್ಮನಿರಿ. ಒಂದು ನಿಮಿಷ ತಡೆಯಿರಿ, ಅವರು ಮುಗಿಸುತ್ತಾರೆ.

ಶ್ರೀ ಅಪ್ಪಾಜಿ ಎಸ್.ನಾಡಗೌಡ:- ರಾಜ್ಯಾಂಗ ವ್ಯವಸ್ಥೆಯಲ್ಲಿ ವಿಶ್ವಾಸ ಇಲ್ಲದಿದ್ದರೆ ಹಾಗೆ ಮಾಡಿ. ಇವತ್ತು ಸಮರ್ಪಕವಾದಂಥ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ, ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ಕೊಟ್ಟಿದ್ದಾರೆ, ಮಾನ್ಯ ಗೃಹಸಚಿವರೂ ಕೊಟ್ಟಿದ್ದಾರೆ. ಏನೇನು ಬೇಕು ಅದೆಲ್ಲಾ ಹೇಳಿದ್ದಾರೆ ಮತ್ತು ಏನು ನಿಮ್ಮ ಸಲಹೆಗಳನ್ನು ನೀಡಿದ್ದೀರಿ, ಅವೆಲ್ಲವನ್ನೂ ನೋಡಿ ಅನುಷ್ಠಾನಕ್ಕೆ ತರುತ್ತೇವೆ ಎನ್ನುವಂಥಾದ್ದನ್ನೂ ಕೂಡ ಹೇಳಿದ್ದಾರೆ. ಆದರೂ ಕೂಡ ಈ ರೀತಿ ಧರಣಿಯನ್ನು ಮುಂದುವರೆಸಿಕೊಂಡು ಹೋಗತಕ್ಕದ್ದು ಈ ಸಭೆಗೆ ಕೂಡ ಶೋಭೆಯಲ್ಲ ಮತ್ತು ವಿರೋಧಪಕ್ಷದವರು ನೀವು ತಿಳಿದಿರಬಹುದು, ಇದರಿಂದ ಮೈಲೇಜ್ ಬರುತ್ತದೆ ಎಂದು ದಯವಿಟ್ಟು ಇದನ್ನು ಮಾಡದೆ ಮುಂದಿನ ಕಲಾಪಗಳನ್ನು ನಡೆಸಿಕೊಡುವುದಕ್ಕೆ ತಾವು ಅನುವು ಮಾಡಿಕೊಟ್ಟು ಸಹಕರಿಸಬೇಕೆಂದು ಮಾನ್ಯ ಸಭಾಧ್ಯಕ್ಷರ ಮೂಲಕ ತಮಗೆಲ್ಲರಿಗೂ ಕೇಳಿಕೊಳ್ಳುತ್ತೇನೆ.

ಶ್ರೀ ಗುಂಡಪ್ಪ ವಕೀಲ:- ಮಾನ್ಯ ಅಧ್ಯಕ್ಷರೇ, ಈ ಜಯಂತ್ ತಿನೇಕರ್ ಸುಮಾರು ಐದು ವರ್ಷಗಳಿಂದ ಸರ್ಕಾರದ ಹಿಂದೆ ಬಿದ್ದಿದ್ದಾರೆ. ಸರ್ಕಾರದವರು ಬಹಳ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳುತ್ತೇವೆ, ಪೋಲೀಸ್‌ನವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿ ನಮ್ಮ ಸನ್ಮಾನ್ಯ ಗೃಹ ಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೆ, ಅದರ ಹಿನ್ನಲೆಯಲ್ಲಿ ಐದು ವರ್ಷಗಳಿಂದ ಸಾಕ್ಷಿ ಪುರಾವೆಗಳೊಂದಿಗೆ

ಪೊಲೀಸರ ಹಿಂದೆ, ಸರ್ಕಾರದ ಹಿಂದೆ ಬಿದ್ದು ಹೀಗೆಲ್ಲಾ ನಡೆಯುತ್ತಿದೆ, ನಕಲಿ ದಂಧೆ ನಡೆಯುತ್ತಿದೆ, ಅವ್ಯವಹಾರ ನಡೆಯುತ್ತಿದೆ, ಇದನ್ನು ತನಿಖೆ ಮಾಡಿಯೆಂದು ಜಯಂತ್ ತಿನೇಕರ್ ಅವರು ಸರ್ಕಾರದ ಹಿಂದೆ ಬಿದ್ದಿದ್ದರೂ ಐದು ವರ್ಷಗಳಿಂದ ಏನು ಮಾಡಿದ್ದೀರಿ?

(ಗೊಂದಲ)

ಶ್ರೀ ಅಪ್ಪಾಜಿ ಎಸ್.ನಾಡಗೌಡ:- ಪದೆಪದೇ ಅದನ್ನೇ ರಿಪಿಟೇಷನ್ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಗುಂಡಪ್ಪ ವಕೀಲ:- ಐದು ವರ್ಷಗಳಿಂದ ಏನಾಯಿತು? ಕಟ್ಟಕಡೆಗೆ ಜಯಂತ್ ತಿನೇಕರ್ ಫೋನು ಮಾಡಿ ಸಾಂಗ್ಲಿಯಾನಾ ಅವರಿಗೆ ಆಜ್ಮೀರಾದಲ್ಲಿ ಕರೀಂಲಾಲಾ ಇದ್ದಾನೆ, ನೀವು ಅವನನ್ನು ಅರೆಸ್ಟ್ ಮಾಡಿ ಎಂದು ಹೇಳಿದಾಗ ಪೊಲೀಸರು ಹೋಗಿ ಆತನನ್ನು ಅರೆಸ್ಟ್ ಮಾಡುತ್ತಾರೆ. ಅವನು ಎಲ್ಲಿ ಇರುತ್ತಾನೆ ಎಂದು ಇವರಿಗೆ ಗೊತ್ತಿಲ್ಲ, ಇವತ್ತು ನಾವು ಅರೆಸ್ಟ್ ಮಾಡಿದ್ದೇವೆ, ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದಾಕ್ಷಣ ಇದು ಸಮರ್ಪಕವಾದ ಉತ್ತರ ಆಗುವುದಿಲ್ಲ. ಒಬ್ಬ ಖಾಸಗಿ ಮನುಷ್ಯ ಮಾಹಿತಿಯನ್ನು ಕೊಟ್ಟ ಮೇರೆಗೆ ಆಜ್ಮೀರಾಕ್ಕೆ ಹೋಗಿ ನೀವು ಅರೆಸ್ಟ್ ಮಾಡಿಕೊಂಡು ಬಂದಿದ್ದೀರಿ. ಅದೂ ಅಲ್ಲದೆ ತಾವು ನಂಬುವುದಕ್ಕೆ ತಯಾರಿಲ್ಲ, ಜಯಂತ್ ತಿನೇಕರನ ಹೇಳಿಕೆ ಮೇಲೆ ನಿಮಗೆ ನಂಬಿಕೆ ಇಲ್ಲ.....

(ಗೊಂದಲ)

ಶ್ರೀ ಕರಿಯಣ್ಣ:- ಹೇಳಿದ್ದನ್ನೇ ಹೇಳುತ್ತಿದ್ದಾರೆ....

(ಗೊಂದಲ)

ಅಧ್ಯಕ್ಷರು:- ಕಾರ್ಯಕಲಾಪ ಮಾಡುವುದಕ್ಕೆ ನಮಗೆ ಅನುವು ಮಾಡಿಕೊಡಿ ಅಷ್ಟೆ ನೀವು ವಕೀಲರಿದ್ದೀರಿ, ಚೆನ್ನಾಗಿ ಆರ್ಗ್ಯುಮೆಂಟ್ ಮಾಡುತ್ತಿದ್ದೀರಿ.

ಶ್ರೀ ಗುಂಡಪ್ಪ ವಕೀಲ:- ಚೆನ್ನಾಗಿ ಆರ್ಗ್ಯುಮೆಂಟ್ ಅಲ್ಲ ಇದು ಕೋಟ್ಯಾಂತರ ರೂಪಾಯಿಗಳಿಗೆ ಸಂಬಂಧಪಟ್ಟಿರತಕ್ಕಂಥ ಅವ್ಯವಹಾರ. 12 ಕೋಟಿ ರೂಪಾಯಿಗಳ ಸ್ಟಾಂಪ್ ಪೇಪರ್‌ನ್ನು ಜಪ್ತಿ ಮಾಡಿ ಇದರ ಬಗ್ಗೆ ಚಾರ್ಜ್‌ಶೀಟ್ ಹಾಕಿದ್ದೇವೆ ಎಂದರೆ.....

(ಗೊಂದಲ)

ಅಧ್ಯಕ್ಷರು:- ಎರಡು-ಮೂರು ದಿನಗಳಿಂದ ಎಲ್ಲಾ ಹೇಳಿದ್ದೀರಿ. ಹೇಳಿದ್ದನ್ನೇ ಏಕೆ ಹೇಳುತ್ತೀರಿ?

ಶ್ರೀ ಗುಂಡಪ್ಪ ವಕೀಲ:- ಅಧ್ಯಕ್ಷರೇ, ಇದನ್ನು ಹೇಳಿದ್ದೇವಾ?

(ಗೊಂದಲ)

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೇ, ಈ ತರಹ ಅಲ್ಲಿ ಹೋಗಿ ಭಾಷಣ ಮಾಡುವುದು ಮತ್ತು ಬಂದು ಇಲ್ಲಿ ಕುಳಿತುಕೊಂಡರೆ ಹೇಗೆ? ತಾವು ಈಗಾಗಲೇ ಈ ವಿಚಾರದಲ್ಲಿ ರೂಲಿಂಗ್ ಕೊಟ್ಟಿದ್ದೀರಿ. ರೂಲಿಂಗ್ ಕೊಟ್ಟಾದ ಮೇಲೆ ತಾವು ಭಾಷಣ ಮಾಡುವುದಕ್ಕೆ ಅವಕಾಶ ಕೊಟ್ಟರೆ ಹೇಗೆ? ವಿರೋಧ ಪಕ್ಷದ ನಾಯಕರು ಎಲ್ಲ ಹೇಳಿದ್ದಾರೆ....

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು:- ಹೀಗಾದರೆ ಬೇರೆ ಶಾಸಕರಿಗೂ ಕೂಡ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಕರಿಯಣ್ಣ:- ಯಾವ ನಿಯಮದ ಅಡಿಯಲ್ಲಿ ತಾವು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ?

(ಗೊಂದಲ)

ಅಧ್ಯಕ್ಷರು:- ಯಾವಗಲ್‌ರವರೇ, ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಪ್ರಸ್ತಾವದ ಬಗ್ಗೆ ನೀವು ಪ್ರಾರಂಭ ಮಾಡಿ....

ಅಧ್ಯಕ್ಷರು:- ಯಾವಗಲ್, ನೀವು ಹೇಳಿ.....

(ಗೊಂದಲ)

ಅಧ್ಯಕ್ಷರು:- ಗೃಹಸಚಿವರು ಏನೋ ಹೇಳುತ್ತಾರೆ, ಕೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹಮಂತ್ರಿಗಳು):- ಈಗ ಅವರು ಧರಣಿ ಮಾಡಬೇಕಾದರೆ ಧರಣಿ ಮಾಡಲಿ. ಅದು ತಮಗೆ ಬಿಟ್ಟಿದ್ದು. ಆದರೆ ಇಲ್ಲಿ ಧರಣಿ ಮಾಡುವುದಿಲ್ಲ, ಪುನಃ ಅಲ್ಲಿಗೆ ಹೋಗಿ ಮಾತನಾಡಿಕೊಂಡು ಮತ್ತೆ ಬರುವುದು ಮಾಡುತ್ತಿದ್ದಾರೆ. ಇದು ಹೀಗೆ ಕಂಟಿನ್ಯೂ ಆದರೆ ಯಾರು ರಿಪ್ಲೈ ಕೊಡುತ್ತಾರೆ? ಇದಕ್ಕೆ ರಿಪ್ಲೈ ಕೊಡಬೇಕಲ್ಲಾ? ಈಗ ಡಿಬೇಟ್ ಮುಗಿಸಿ ನಾವು ರಿಪ್ಲೈ ಕೊಟ್ಟಿದ್ದೇವೆ, ಅವರನ್ನು

ಅಪೀಲ್ ಮಾಡಿಕೊಂಡಿದ್ದೇವೆ. ನಿಷ್ಪಕ್ಷಪಾತವಾದಂಥ ಎನ್‌ಕ್ವೈರಿಯನ್ನು ನಾವು ಮಾಡುತ್ತಿದ್ದೇವೆ....

(ಗೊಂದಲ)

ಅಧ್ಯಕ್ಷರು:- ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಗುಂಡಪ್ಪ ವಕೀಲ:- ನಮಗೆ ಅವಕಾಶ ಕೊಡಬೇಕು.....

ಅಧ್ಯಕ್ಷರು:- ಮಂತ್ರಿಗಳು ಮಾತನಾಡುವಾಗ ಇಂಟರಪ್ಟ್ ಮಾಡಬೇಡಿ. ಈಗ ಒಂದು ಕೆಲಸ ಮಾಡಿ. ಅಲ್ಲಿ ಹೋಗಿ ಕುಳಿತುಕೊಳ್ಳಿ. ಇಲ್ಲದಿದ್ದರೆ ಇಲ್ಲೇ ಕುಳಿತುಕೊಳ್ಳಿ. ಅಲ್ಲಿ ಹೋಗಿ ಮಾತನಾಡಿ ನಂತರ ಇಲ್ಲಿಗೇ ಬರುವುದು ಇದು ಸರಿಯಲ್ಲ. ಅದು ನನಗೆ ಇಷ್ಟವಾಗುವುದಿಲ್ಲ. ಯಾವುದಾದರೂ ಒಂದು ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಇದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಅವರು ಸಹ ಬೆಳಕು ಚೆಲ್ಲಿದ್ದಾರೆ, ನಾವೂ ಉತ್ತರ ಕೊಟ್ಟಿದ್ದೇವೆ. ಅಡಿಷನಲ್ ಡಿ.ಜಿ.ಪಿ. ಮಟ್ಟದಲ್ಲಿ ಇನ್‌ವೆಸ್ಟಿಗೇಷನ್ ಮಾಡುವುದಾಗಿ ಹೇಳಿದ್ದೇವೆ. ಪೋಲೀಸ್ ಆಯುಕ್ತರು ಮತ್ತು ಡಿ.ಜಿ.ಪಿ.-ಯವರುಗಳ ಶಿಫಾರಸ್ಸಿನ ಮೇರೆಗೆ ಸರ್ಕಾರದವರು ನಾವು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಹೀಗಿರುವಾಗ ಇದು ಸಿ.ಬಿ.ಐ.-ನಿಂದಲೇ ತನಿಖೆ ಆಗಬೇಕೆಂದು ಹಟ ಹಿಡಿಯುವುದು ಸರಿಯಲ್ಲ. ಇವರ ಚಾರ್ಜ್‌ಶೀಟ್‌ನಲ್ಲಿ ರೋಷನ್‌ಬೇಗ್‌ರವರನ್ನು ಇಟ್ಟುಕೊಂಡಿದ್ದಾರೆ, ಆದರೆ ಪೋಲೀಸ್‌ನವರ ಚಾರ್ಜ್‌ಶೀಟ್‌ನಲ್ಲೂ ಬೇಕಲ್ಲಾ. ಈಗ ವಿಚಾರಣೆಯಾಗುತ್ತಿದೆ, ವರದಿ ಬಂದನಂತರ ಮುಂದೆ ನೋಡೋಣ. ಅದನ್ನು ಬಿಟ್ಟು ರೋಷನ್‌ಬೇಗ್ ರಾಜೀನಾಮೆ ಕೊಡಲಿ, ವಿಚಾರಣೆಗೆ ಸಿ.ಬಿ.ಐ.-ಗೆ ವಹಿಸಿ ಎಂದು ಕೇಳಿಕೊಂಡು ಕೂರುವುದು ಅಷ್ಟೊಂದು ಸಮಂಜಸವಾಗುವುದಿಲ್ಲ. ರಾಜ್ಯಪಾಲರ ಭಾಷಣದ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ, ಸಂವಿಧಾನದ ತಿದ್ದುಪಡಿಯ ಬಗ್ಗೆ ವಿಷಯವಿದೆ, ಇವುಗಳ ಬಗ್ಗೆ ಮಾತನಾಡಬಹುದು. ಆದ್ದರಿಂದ ಈಗ ಇನ್‌ವೆಸ್ಟಿಗೇಷನ್‌ಗೆ ಅನುವು ಮಾಡಿಕೊಡಿ. ಅದನ್ನು ಬಿಟ್ಟು ಹೀಗೆಯೇ ಕಾಲ ಕಳೆದರೆ ಹೇಗೆ? ಹೀಗಾದರೆ ಜನರು ಸುಮ್ಮನೆ ಕಾಲ ಕಳೆಯುತ್ತಿದ್ದಾರೆಂದು ಅವರಿಗೂ ಹೇಳುತ್ತಾರೆ, ನಮಗೂ ಇವರೇಕೆ ಒಪ್ಪಲಿಲ್ಲವೆಂದು ಹೇಳಬಹುದು, ನಮ್ಮ ವಾದವನ್ನು ಇಟ್ಟಿದ್ದೇವೆ, ಅವರು ಕೇಳಿದ್ದಕ್ಕೆಲ್ಲಾ ಉತ್ತರ ಕೊಟ್ಟಿದ್ದೇವೆ, ಅದು ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲಿದ್ದಾಗ, ಕೋರ್ಟ್‌ನ ಮುಂದಿರುವಾಗ ಎಷ್ಟರಮಟ್ಟಿಗೆ ಚರ್ಚೆ ಮಾಡಲು ಸಾಧ್ಯವೋ ಅಷ್ಟರಮಟ್ಟಿಗೆ ಮಾಡಬಹುದು, ಪ್ರತಿಯೊಂದನ್ನೂ ಬಿಚ್ಚಿ ಬಿಚ್ಚಿ ಹೇಳಲು ಸಾಧ್ಯವಾಗುವುದಿಲ್ಲ. ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲಿ ಏನು ಬರುತ್ತದೋ, ಕೋರ್ಟ್ ಮುಂದೆ ಎಲ್ಲಾ ಕಾಗದ ಪತ್ರಗಳೂ ಬರುತ್ತವೆ, ಪೋಲೀಸ್

ಕಮೀಷನರ್‌ರವರು ಬರೆದಿದ್ದು, ಸರ್ಕಾರ ಬರೆದಿದ್ದು, ಡಿ.ಜಿ.ಪಿ. ರವರ ಮೂಲಕ ನಾವು ಕೇಳಿಕೊಂಡಿದ್ದು ಹೀಗೆ ಎಲ್ಲವೂ ಬರುತ್ತದೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಈ ವಿಚಾರ ಏಕಿಷ್ಟು ಪ್ರಾಮುಖ್ಯತೆಯನ್ನು ಹೊಂದಿದೆಯೆಂದರೆ, ಇಲ್ಲಿ ಕೇವಲ 5-10 ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಪ್ರಶ್ನೆಯಾಗಿಲ್ಲ. ಇದರ ಹಿನ್ನೆಲೆ ಬಹಳ ಇದೆ. ರಾಜ್ಯದಲ್ಲಿ ರೈತರ ಸಮಸ್ಯೆ, ಬರಗಾಲದ ಸಮಸ್ಯೆ, ಸಾಲ ವಸೂಲಾತಿ, ವಿದ್ಯುತ್ ಅಭಾವ ಮುಂತಾದ ಗಹನವಾದ ವಿಚಾರಗಳ ಬಗ್ಗೆ ಮಾತನಾಡುವುದಿದೆ. ಮಾನ್ಯ ನಾಡಗೌಡರವರು ಇದರ ಬಗ್ಗೆ ಹೇಳಿದ್ದಾರೆ. ನಮಗೂ ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಬಹಳ ಆಸಕ್ತಿ ಇದೆ. ಆದರೆ ಇದರ ಬಗ್ಗೆ ಚರ್ಚೆ ಮಾಡಬೇಕಾದರೆ ರಾಜ್ಯ ಸರ್ಕಾರ ಇದನ್ನು ಸಿ.ಬಿ.ಐ.ಗೆ ಕೊಟ್ಟುಬಿಡಲಿ. ಇಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಲೂಟಿಯಾಗುತ್ತಿದೆ. ಇದು ಹತ್ತು ಸಾವಿರ ಕೋಟಿ ರೂಪಾಯಿಗಳ ಹಗರಣ. ಸಾವಿರಾರು ಕೋಟಿ ರೂಪಾಯಿಗಳ ಆದಾಯ ಪ್ರತಿ ವರ್ಷ ಕಡಿಮೆಯಾಗುತ್ತಿದೆ. 300 ಕೋಟಿ ರೂಪಾಯಿಗಳ ರೈತರ ಸಾಲದ ಬಡ್ಡಿ ಮನ್ನಾ ಮಾಡಿ ಎಂದರೆ ಹಣವಿಲ್ಲವೆಂದು ಹೇಳುತ್ತೀರಿ. ಆದರೆ ಇಲ್ಲಿ ಸ್ಟ್ಯಾಂಪ್ ಪೇಪರಿನ ನಕಲೀಕರಣದಿಂದಾಗಿ ಆದಾಯ ಕಡಿಮೆಯಾಗುತ್ತಿದೆಯಲ್ಲಾ? ಎಷ್ಟು ಆದಾಯ ಕಡಿಮೆಯಾಗಿದೆ ಎಂಬ ಬಗ್ಗೆ ಮಾನ್ಯ ಕಂದಾಯ ಸಚಿವರಿಂದ ಚಕಾರವೇ ಇಲ್ಲ. ಕಂದಾಯ ಇಲಾಖೆಯಲ್ಲಿ ಇದರಿಂದ ಆದಾಯ ಕಡಿಮೆಯಾಗುತ್ತಿದೆ. ಇದರ ಬಗ್ಗೆ ಸರ್ಕಾರದ ಗಮನವಿಲ್ಲ. ಆದ್ದರಿಂದ ಇದರ ಬಗ್ಗೆ ಮಾತನಾಡುವುದು ಬೇಕಾದಷ್ಟು ಇದೆ. ಸದನದಲ್ಲಿ ಯಾವುದೇ ಚರ್ಚೆ ಇಲ್ಲದೆ ಕಲಾಪವನ್ನು ಮುಂದೆ ಹಾಕಬೇಕು ಎಂಬುದು ನಮ್ಮ ಉದ್ದೇಶವಾಗಿಲ್ಲ. ನಾವು ಇದರ ಬಗ್ಗೆ ಸಾಕಷ್ಟು ವಿಚಾರಗಳನ್ನು ಮಾತನಾಡಿದ್ದೇವೆ, ರೈತರ ಸಮಸ್ಯೆ, ವಿದ್ಯುತ್ ಸಮಸ್ಯೆ ಇನ್ನು ಹಲವಾರು ಗಂಭೀರವಾದ ವಿಚಾರದ ಬಗ್ಗೆ ನಾವು ಮಾತನಾಡುವವರಿದ್ದೇವೆ. ಅದಕ್ಕೆ ಅವಕಾಶ ಕೊಡುವುದಿದ್ದರೆ ಇಂಥ ಪ್ರಕರಣಗಳ ಬಗ್ಗೆ ರಾಜ್ಯ ಸರ್ಕಾರ ನಿಷ್ಪಕ್ಷಪಾತವಾಗಿ ತನಿಖೆಯನ್ನು ಮಾಡಿಸುವ ಅಗತ್ಯವಿದೆ. ನಾವು ಏನೇ ಕೇಳಿದರೂ ಮಾನ್ಯ ಖರ್ಗೆಯವರು ಚಾರ್ಜ್‌ಶೀಟ್ ಹಾಕಿದ್ದೇವೆಂದು ಹೇಳುತ್ತಾರೆ. ಅದು ಯಾವಾಗಿನ ಚಾರ್ಜ್‌ಶೀಟ್ 2000 ಇಸವಿಯಲ್ಲಿ ಹಾಕಿದ್ದ ಚಾರ್ಜ್‌ಶೀಟ್ ಅದು. ಕರೀಂಲಾಲಾ ಅರೆಸ್ಟ್ ಆದ ಮೇಲೆ ಏನು ಚಾರ್ಜ್‌ಶೀಟ್ ಹಾಕಿದ್ದೀರಿ? ಯಾರ್ಯಾರ ಹೆಸರುಗಳು ಹೊರಗಡೆ ಬಂದಿದೆ? ಆ ಚಾರ್ಜ್‌ಶೀಟ್‌ನಲ್ಲಿ ಏನು ಡೀಟೇಲ್ಸ್ ಇದೆ? ಯಾರು ಆರೋಪಿಗಳಿದ್ದಾರೆ? ಅದನ್ನೆಲ್ಲಾ ಸದನದಲ್ಲಿ ಮಂಡನೆ ಮಾಡಿ. ಅದನ್ನು ಬಿಟ್ಟು 2000 ಇಸವಿಯಲ್ಲಿ 12 ಕೋಟಿ ರೂ. ಪ್ರಕರಣದಲ್ಲಿ ಸೀಜ್ ಮಾಡಿದಾಗ ಹಾಕಿದ್ದ ಚಾರ್ಜ್‌ಶೀಟ್‌ನ ಬಗ್ಗೆಯೇ ಮಾತನಾಡುತ್ತಾರೆ. ಪೋಲೀಸ್ ಕಮೀಷನರ್‌ರವರು ಏನು ಕಾಗದ ಬರೆದಿದ್ದಾರೆ ಅದರ ಬಗ್ಗೆ ಮಾತನಾಡಲು ತಯಾರಿಲ್ಲ. ಅದರ ಬಗ್ಗೆ

ಮಾತನಾಡಲು ಮುಜುಗರವಾಗಿದ್ದರೆ ತಮ್ಮ ಕೊಠಡಿಗೆ ಕರೆದು ನಮಗೆ ತೋರಿಸಬಹುದಿತ್ತಲ್ಲ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು):- ಅಧಿಕಾರಿಗಳು ಸಲಹೆಗಳನ್ನು ಕೊಡುತ್ತಾರೆ. ಅವರು ಅಡಿಷನಲ್ ಡಿ.ಜಿ.ಪಿ.ಯವರೂ ಮಾಡಬಹುದು, ಸಿ.ಬಿ.ಐ.ನವರೂ ಮಾಡಬಹುದೆಂದು ಎರಡೂ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಆ ಎರಡರಲ್ಲಿ the government has accepted that additional DGP should be appointed. ಸರ್ಕಾರಕ್ಕೆ ಅಧಿಕಾರಿಗಳಿಂದ ನೂರಾರು ಸಲಹೆಗಳು ಬರುತ್ತದೆ, ಸರ್ಕಾರ ಅದರಲ್ಲಿ ಸೂಕ್ತವಾದಂಥಾದ್ದನ್ನು ಮಾಡುತ್ತದೆ. ಈಗಾಗಲೇ ನಾವು ಚಾರ್ಜ್‌ಶೀಟ್‌ನ್ನು ಹಾಕಿದ ಮೇಲೆ ಪುನಃ ಅದನ್ನು ಮಾಡಲು ಬರುವುದಿಲ್ಲವೆಂದು ಎಲ್ಲರಿಗೂ ಗೊತ್ತಿದೆ. ಗೊತ್ತಿದ್ದರೂ ಪುನಃ ಅದನ್ನೇ ಕೇಳಿದರೆ ಹೇಗೆ? ಚಾರ್ಜ್‌ಶೀಟ್ ಹಾಕಿದ ಮೇಲೂ ಸುಪ್ರೋ-ಮೋಟೋ ಎಲ್ಲಾ ಕೇಸಸ್‌ನಲ್ಲಿ ಹಿಂದಕ್ಕೂ ರೆಫರ್ ಮಾಡಿದ್ದರೆ ಇವತ್ತೂ ಅದನ್ನೇ ಮಾಡಬಹುದು. ಆದರೆ ಈಗ ಇನ್‌ವೆಸ್ಟಿಗೇಷನ್ ಆಗಿ ಕೋರ್ಟ್ ಮುಂದೆ ಇದ್ದಾಗ ಚಾರ್ಜ್‌ಶೀಟ್‌ನ್ನೂ ಫೈಲ್ ಮಾಡಿದ ಮೇಲೆ, ಈಗ ಅಡಿಷನಲ್ ಎವಿಡೆನ್ಸ್ ಏನು ಬರುತ್ತದೋ ಅದು ಅಡಿಷನಲ್ ಚಾರ್ಜ್‌ಶೀಟ್ ಎಂದು ಹೋಗುತ್ತದೆಯೇ ಹೊರತು ಮೂಲ ಕೇಸು ಎನ್ನತಕ್ಕದ್ದಲ್ಲ. ಅವರು ವಕೀಲರಾಗಿದ್ದಾರೆ. ಅವರಿಗೂ ಅದು ಚೆನ್ನಾಗಿ ಗೊತ್ತಿದೆ. ಆದರೂ ಇಲ್ಲಿ ವಕಾಲತ್ತನ್ನು ಬೇರೆ ಮಾಡುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಅಡಿಷನಲ್ ಚಾರ್ಜ್‌ಶೀಟನ್ನೇ ಹಾಕುವುದು. ಅದರ ಬಗ್ಗೆಯೇ ನಾನು ಹೇಳುತ್ತಿದ್ದೇನೆ. ಕರೀಂಲಾಲಾನ ಅರೆಸ್ಟ್ ಆಗುವವರೆಗಿನ ಹಂತ ಒಂದು, ಅರೆಸ್ಟ್ ಆದ ಮೇಲೆ ಪರಿಸ್ಥಿತಿ ಬದಲಾವಣೆಯಾಗಿದೆ. ಕರೀಂಲಾಲಾ ಯಾವಾಗ ಅರೆಸ್ಟ್ ಆಗಿ ಸ್ಟೇಟ್‌ಮೆಂಟ್ ಕೊಟ್ಟ ಆಗ ಇವೆಲ್ಲಾ ಪ್ರಮುಖರ ಹೆಸರುಗಳು ಹೊರಕ್ಕೆ ಬಂದವು. ಆದ್ದರಿಂದ ಇವರು ಇನ್‌ವೆಸ್ಟಿಗೇಷನ್ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಇಂಪಾರ್ಶಿಯಲ್ ತನಿಖೆಯಾಗುತ್ತಿಲ್ಲ. ಯಾರನ್ನೂ ಕರೆಸಿ ಮಾತನಾಡುತ್ತಿಲ್ಲ. ಅದನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಯುತ್ತಿದೆ. ಅಬ್ದುಲ್ ಕರೀಂಲಾಲಾ ತೆಲಗಿಯವರ ಸಹೋದರ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿದ್ದಾರೆಂದ ಮೇಲೆ ಯಾವ ರೀತಿಯಲ್ಲಿ ನಿಷ್ಪಕ್ಷಪಾತದಿಂದ ತನಿಖೆಯಾಗಲು ಸಾಧ್ಯವಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಕಾಂಗ್ರೆಸ್ ಪಕ್ಷದವರಿರಲಿ, ಕಮ್ಯುನಿಸ್ಟ್ ಪಕ್ಷದವರಿರಲಿ, ಬಿ.ಜೆ.ಪಿ.ಯವರಿರಲಿ, ಶಿವಸೇನಾದವರಿರಲಿ ಯಾರೇ ಕರೀಂಲಾಲಾ ಸಹೋದರರೊಂದಿಗೆ ಸಂಬಂಧ ಇದ್ದರೂ ನಾವೇನೂ ಹೆದರುವುದಿಲ್ಲ, ನಮ್ಮ ಅಧಿಕಾರಿಗಳೂ ಸಹ ಹೆದರುವುದಿಲ್ಲ. ಕೋರ್ಟ್ ಇದೆ, ಅದು ಎಲ್ಲವನ್ನೂ ನೋಡುತ್ತದೆ. ಕೋರ್ಟು ಏನು ಕಾಂಗ್ರೆಸ್ ಪಕ್ಷ, ಬಿ.ಜೆ.ಪಿ. ಎಂದು ನೋಡುತ್ತದೆಯೇ?

ಕೋರ್ಟ್ ಎಲ್ಲವನ್ನೂ ನೋಡುತ್ತದೆ, ಎವಿಡೆನ್ಸ್ ಮೇಲೆ ಹೋಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್:- ಯಾವುದೇ ಪಕ್ಷದ ನಾಯಕರುಗಳಿರಲಿ, ಯಾವುದೇ ದೊಡ್ಡ ವ್ಯಕ್ತಿಗಳಿರಲಿ, ಇದನ್ನು ಸಿ.ಬಿ.ಐ.ಗೆ ಕೊಟ್ಟುಬಿಡಲಿ, ಇದನ್ನು ಸಿ.ಬಿ.ಐ.ಗೆ ಕೊಡಲು ಏಕೆ ಹಿಂದೇಟು ಹಾಕುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಮ್ಮ ಪೋಲೀಸ್ ಅಧಿಕಾರಿಗಳು ಇದರ ಬಗ್ಗೆ ಸಾಕಷ್ಟು ಇನ್‌ವೆಸ್ಟಿಗೇಷನ್‌ಗಳನ್ನು ಮಾಡಿದ್ದಾರೆ, ಎವಿಡೆನ್ಸ್ ಇಟ್ಟು ಕೇಸನ್ನು ದಾಖಿಲು ಮಾಡಿದ್ದಾರೆ. ''ಮೈನತ್ ಕರೆ ಮುರ್ಗಿ ಸಾಬ್, ಅಂಡಾ ಕಾಯೇ ಫಕೀರ್ ಸಾಬ್'' ಎನ್ನುವಂತಾಗಬಾರದು ಎಂದು ನಾವೇ ಇದನ್ನು ಮಾಡುತ್ತೇವೆ. ನಾವು ಸಮರ್ಥರಿದ್ದೇವೆ ಎಂದು ನಾವು ಮಾಡುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ಅಬ್ದುಲ್ ಕರೀಂಲಾಲಾ ಅರೆಸ್ಟ್ ಆದ ಮೇಲೆ ಇದರ ಬಗ್ಗೆ ಸಂಶಯಗಳು ಬರುತ್ತಿದೆ. ಇನ್‌ವೆಸ್ಟಿಗೇಷನ್ ಸರಿಯಾಗಿ ಆಗದ ರೀತಿಯಲ್ಲಿ ಒತ್ತಡ ಬರುತ್ತಿದೆ. ನಿಷ್ಪಕ್ಷಪಾತವಾದ ತನಿಖೆಗೆ ರಾಜಕೀಯ ಒತ್ತಡ ಬರುತ್ತಿದೆ. ಈ ರೀತಿ ಒತ್ತಡವಿರುವ ಸಲುವಾಗಿಯೇ, ಪೋಲೀಸ್ ಕಮೀಷನರ್‌ರವರು ಸಿ.ಬಿ.ಐ.ಗೆ ಒಪ್ಪಿಸಬಹುದು ಎನ್ನತಕ್ಕ ಅಭಿಪ್ರಾಯವನ್ನೇಕೆ ಕೊಟ್ಟರು? ಅವನ ಅರೆಸ್ಟ್ ಆಗುವ ಮೊದಲು ನಾವ್ಯಾರೂ ಇದರ ಬಗ್ಗೆ ಚಿಂತನೆ ಮಾಡಿರಲಿಲ್ಲ. ಆದ್ದರಿಂದ ರಾಜ್ಯ ಸರ್ಕಾರದವರು ಮಂತ್ರಿಗಳನ್ನು ರಕ್ಷಣೆ ಮಾಡಲು ಹೊರಟಿದ್ದಾರೆ. ದೇಶದ್ರೋಹಿಗಳನ್ನು ರಕ್ಷಣೆ ಮಾಡಲು ಹೊರಟಿದ್ದಾರೆ. ಆರೋಪಿಗಳಿಗೆ ರಕ್ಷಣೆ ಸಿಗುತ್ತಿದೆ, ಯಾವುದೇ ನಿಷ್ಪಕ್ಷಪಾತವಾದ ಇನ್‌ವೆಸ್ಟಿಗೇಷನ್ ಆಗುತ್ತಿಲ್ಲ. ಆದ್ದರಿಂದ ಇದನ್ನು ಸಿ.ಬಿ.ಐ. ತನಿಖೆಗೆ ಕೊಡಬೇಕೆಂದು ನಾವು ಒತ್ತಾಯವನ್ನು ಮುಂದುವರೆಸುತ್ತಿದ್ದೇವೆ.

ಶ್ರೀ ಗುಂಡಪ್ಪ ವಕೀಲ್:- ಮಾನ್ಯ ಗೃಹ ಸಚಿವರು 24ರಂದು ಕೆಲವು ಫೋಟೋಗಳನ್ನು ತೋರಿಸಿ 28ರಂದು ಪುರಾವೆಗಳ ಸಮೇತ ತೋರಿಸುವುದಾಗಿ ಹೇಳಿದ್ದರು.

ಅಧ್ಯಕ್ಷರು:- ನಿಮ್ಮ ನಾಯಕರು ಇದರ ಬಗ್ಗೆಯೇ ಮೂರು ದಿವಸಗಳಿಂದ ಹೇಳಿದ್ದಾರೆ. I cannot allow. ಈ ವಿಷಯವನ್ನು ಈಗಾಗಲೇ ಕ್ಲೋಸ್ ಮಾಡಿದ್ದೇವೆ. ಮಾನ್ಯ ಯಾವಗಲ್‌ರವರೆ ತಾವು ಪ್ರಾರಂಭ ಮಾಡಿ.

(ಗೊಂದಲ)

ಶ್ರೀ ಬಿ.ಆರ್.ಯಾವಗಲ್:- ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯಪಾಲರು, ದಿನಾಂಕ 21ರಂದು ಜಂಟಿ ಸದನದಲ್ಲಿ ಮಾಡಿದಂಥ ಭಾಷಣವನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸಿ, ಕಳೆದ ಮೂರು ವರ್ಷಗಳಿಂದ ಮಾಡಿರುವಂಥ.....

(ಗೊಂದಲ)

ಅಧ್ಯಕ್ಷರು:- ಈ ವಿಚಾರದಲ್ಲಿ ಬೇಕಾದಷ್ಟು ಉತ್ತರ ಕೊಟ್ಟಿದ್ದಾರೆ. ಇದನ್ನು ಕ್ಲೋಸ್ ಮಾಡಿದೆ. ನಮ್ಮ ಮುಂದೆ ಬಹಳ ಗಹನವಾದ ವಿಚಾರಗಳು ಚರ್ಚೆಗೆ ಇರುವಾಗ ಸುಮ್ಮನೆ ಏಕೆ ಸಮಯ ವ್ಯರ್ಥಮಾಡುತ್ತೀರಿ? ನೀವೆಲ್ಲಾ ಜನ ಪ್ರತಿ ನಿಧಿಗಳು ಆಯ್ಕೆಯಾಗಿ ಬಂದಿದ್ದೀರಿ, ತಮ್ಮ ಮತದಾರರು ಪಾಚ್ ಮಾಡುತ್ತಿರುತ್ತಾರೆ.

ಶ್ರೀ ಡಿ.ವಿ.ಸದಾನಂದಗೌಡ:- ಮಾನ್ಯ ಅಧ್ಯಕ್ಷರೆ, ಇಡೀ ಸದನದ ಕಾರ್ಯಕಲಾಪವನ್ನು ಐದು ಕೋಟಿ ಕನ್ನಡಿಗರು ವೀಕ್ಷಣೆ ಮಾಡುತ್ತಿದ್ದಾರೆಂದು ತಾವು ಹೇಳಿದ್ದೀರಿ. ಆದರೆ ಕಳೆದ ಎರಡು ತಿಂಗಳುಗಳಿಂದ ಐದು ಕೋಟಿ ಜನರ ಮನಸ್ಸಿನ ಭಾವನೆಗಳು ಮಾಧ್ಯಮಗಳ ಮೂಲಕ, ಬೇರೆ ಬೇರೆ ವ್ಯವಸ್ಥೆಗಳ ಮೂಲಕ ಇಡೀ ಧಾರವಾಹಿಯ ರೂಪದಲ್ಲಿ ಬರುತ್ತಿದೆ. ಸರ್ಕಾರದ ಮೇಲೆ ಸಂಶಯದ ಛಾಯೆ ಬಹಳ ಭೀಕರವಾಗಿ ಕವಿದಿದೆ. ಜನರೆಲ್ಲರೂ ಯಾರೋ ಮಂತ್ರಿ ಮಹೋದಯರೊಬ್ಬರು ಇದಕ್ಕೆ ಸಂಬಂಧಪಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಇವರನ್ನು ರಕ್ಷಣೆ ಮಾಡುತ್ತಿದ್ದಾರೆಂದು ಪರೋಕ್ಷವಾಗಿ ಇವರ ವಾದದಿಂದ ಗೊತ್ತಾಗುತ್ತಿದೆ. ಸಿ.ಬಿ.ಐ. ಗೆ ಹಸ್ತಾಂತರ ಮಾಡುವಂಥಾದ್ದು ಅಥವಾ ಕೇಂದ್ರ ಸರ್ಕಾರದವರೇ ಸುಮೋ-ಮೋಟೋ ಇದನ್ನು ತನಿಖೆ ಮಾಡಬಹುದು ಎನ್ನತಕ್ಕದ್ದು ಎರಡನೆ ಪ್ರಶ್ನೆ. ನಮ್ಮ ರಾಜ್ಯ ಸರ್ಕಾರದ ಒಬ್ಬರು ವರಿಷ್ಠರು, ಮಂತ್ರಿಮಹೋದಯರ ಸಂಬಂಧಿಕರು ಇದರಲ್ಲಿ ಶಾಮೀಲಾಗಿದ್ದಾರೆಂದು ಹೇಳುವುದು ವದಂತಿ ಮಾತ್ರವಲ್ಲ, ಇದರ ಬಗ್ಗೆ ಸಾಕಷ್ಟು ಪುರಾವೆಗಳಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿ ಬಂದಂಥ ಹಿನ್ನೆಲೆಯಲ್ಲಿ ಇವರು ನಿಜವಾದ ಅರ್ಥದಲ್ಲಿ ಸಾಚಾ ಮನುಷ್ಯರು ಎಂದು ಆಗಿದ್ದರೆ ಇನ್‌ವೆಸ್ಟಿಗೇಷನ್‌ನನ್ನು ಬೇರೆಯವರಿಗೆ ಹಸ್ತಾಂತರ ಮಾಡಬಹುದಲ್ಲಾ? ಇನ್ನೂ ಏಕೆ ಸ್ವಪ್ರತಿಷ್ಠೆ? ನಮ್ಮ ಪೋಲೀಸರ ಸಾಮರ್ಥ್ಯದ ಬಗ್ಗೆ ಎರಡು ಮಾತಿಲ್ಲ. ಆದರೆ ಆ ಪೋಲೀಸರ್ ಸಿ.ಬಿ.ಐ.-ಗೆ ಹಸ್ತಾಂತರ ಮಾಡಿದರೂ ಮಾಡಬಹುದು ಎಂದು ಹೇಳಿದ ಮೇಲೆ, ರಾಜ್ಯ ಸರ್ಕಾರದ ಮಂತ್ರಿಯೊಬ್ಬರ ಮೇಲಿರುವಂಥ ದೊಡ್ಡ ಕಪ್ಪು ಛಾಯೆ ಹೊರಕ್ಕೆ ಹೋಗಬೇಕಿದ್ದರೆ ನಿಷ್ಪಕ್ಷಪಾತವಾದ ತನಿಖೆಗಾಗಿ, ಸಿ.ಬಿ.ಐ.-ಗೆ ಹಸ್ತಾಂತರ ಮಾಡಬಹುದಿತ್ತಲ್ಲಾ. ಒಂದು ವೇಳೆ ರಾಜ್ಯ ಸರ್ಕಾರವೇ ತನಿಖೆ ಮಾಡುತ್ತದೆಂದಿದ್ದರೂ ಕನಿಷ್ಟ ಆ ಮಂತ್ರಿಯವರು ರಾಜೀನಾಮೆ ಕೊಡಬಹುದಿತ್ತಲ್ಲಾ? ಎರಡೂ ಬೇಡ, ತನಿಖೆ ಮುಗಿಯುವವರೆಗಾದರೂ ಆ ಮಂತ್ರಿಯವರು ರಾಜೀನಾಮೆ ಕೊಡಬಹುದಿತ್ತಲ್ಲಾ? ರಾಜ್ಯದ ಪೋಲೀಸ್ ವರಿಷ್ಠರು

ಅತ್ಯಂತ ಯಶಸ್ವಿಯಾಗಿ ಕೆಲಸ ನಿರ್ವಹಣೆ ಮಾಡುತ್ತಿದ್ದಾರೆಂದು ಹೇಳಿದ್ದರೂ, ಆಡಳಿತದಲ್ಲಿರುವ ಒಬ್ಬ ಪ್ರಮುಖ ಮಂತ್ರಿ ಅವರು ಆಡಳಿತ ಮಾಡುವಂಥ ಸಂದರ್ಭದಲ್ಲಿ ಎಷ್ಟೇ ಆದರೂ ಯಾವ ರೀತಿಯಲ್ಲಿ ತನಿಖೆ ಮಾಡಬಹುದು ಎಂಬ ಬಗ್ಗೆ ತಾವೇ ಆಲೋಚನೆ ಮಾಡಬೇಕಾಗುತ್ತದೆ. ಎರಡರಲ್ಲಿ ಒಂದನ್ನಾದರೂ ಆಪ್ಟ್ ಮಾಡಬಹುದಲ್ಲಾ? ಕನಿಷ್ಟ ತನಿಖೆಯಾಗುವವರೆಗೆ ಆ ಮಂತ್ರಿ ರಾಜೀನಾಮೆ ಕೊಟ್ಟು ಹೊರಕ್ಕೆ ಉಳಿಯಬಹುದು, ಅವರನ್ನೂ ಅಧಿಕಾರದಲ್ಲಿ ಉಳಿಸಿಕೊಳ್ಳಬೇಕು. ಅವರನ್ನೂ ರಕ್ಷಣೆ ಮಾಡಬೇಕು, ಅವರ ಸಂಬಂಧಿಕರನ್ನೂ ರಕ್ಷಣೆ ಮಾಡಬೇಕು, ಬಾಂಬೆಗೆ ಹತ್ತಾರು ಸಲ ಹೋಗಿ ಬಂದ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬಾರದು ಈ ರೀತಿ ವಿಚಾರಗಳು ನಡೆದರೆ ಸತ್ಯಸಂಗತಿ ಹೇಗೆ ಹೊರಗೆ ಬರುತ್ತದೆ? ನಾವು 150 ಜನರ ಬಗ್ಗೆ ಮಾತನಾಡುವುದಲ್ಲ, ಓಟನ್ನು ಕೊಟ್ಟ ಐದು ಕೋಟಿ ಜನರ ಬಗ್ಗೆ ಮಾತನಾಡಬೇಕು. ತಾವು ಹೇಳಿದ್ದು ಸತ್ಯ. ಈ 150 ಜನರು ಓಟು ಕೊಟ್ಟ ಸಂದರ್ಭದಲ್ಲಿ ಇದ್ದ ಹಾಗೆ ಈಗ ಇಲ್ಲ. ಆಡಳಿತದ ಕುರ್ಚಿಯನ್ನು ಗಟ್ಟಿ ಮಾಡುವ ಪ್ರಯತ್ನವನ್ನು ಅವರು ಮಾಡುತ್ತಿದ್ದಾರೆ. ಆದರೆ ಐದು ಕೋಟಿ ಜನರು ಇವರು ಅಷ್ಟೊಂದು ಪ್ರಾಮಾಣಿಕರಾಗಿದ್ದರೆ ಸಿ.ಬಿ.ಐ. ತನಿಖೆಗೆ ಏಕೆ ಒಪ್ಪಬಾರದೆಂಬುದನ್ನು ಆಲೋಚನೆ ಮಾಡುತ್ತಾರೆ.

ಶ್ರೀ ಎ.ಎಸ್.ನಾಡಗೌಡ:- ಚುನಾವಣೆಯಾಗಿದೆ, ಜನರು ಏನು ತೀರ್ಪು ಕೊಡಬೇಕೋ ಅದನ್ನು ಕೊಟ್ಟಿದ್ದಾರೆ. ಅವರು 150 ಜನ ಸದಸ್ಯರಿದ್ದಾರೆಂದು ತೋರಿಸುತ್ತಿದ್ದಾರೆ.

ಶ್ರೀ ಡಿ.ವಿ.ಸದಾನಂದಗೌಡ:- ನಾಲ್ಕು ಅಕ್ರಮ ಚುನಾವಣೆಗಳನ್ನು ತಾವು ಮಾಡಿದ್ದೀರಿ. ನಾಲ್ಕು ಅಕ್ರಮ ಚುನಾವಣೆ ನಡೆಸಿದ್ದೇವೆಂದು ಹೇಳಿ, ಅದು ಸರಿಯಾಗುತ್ತದೆ. ಅವರು ಸಿ.ಬಿ.ಐ. ತನಿಖೆಗೆ ಒಪ್ಪಲಿ ಇಲ್ಲದಿದ್ದರೆ ಆ ಸಚಿವರು ರಾಜೀನಾಮೆ ಕೊಡಲಿ. ವಿರೋಧ ಪಕ್ಷದ ಸದಸ್ಯರು ಸತ್ಯ ಸಂಗತೀಯನ್ನೇ ಹೇಳುತ್ತಿದ್ದಾರೆಂಬುದು ತಮ್ಮ ಮನಸ್ಸಿಗೂ ಬಂದಿದೆ.

ಅಧ್ಯಕ್ಷರು:- ಸಭೆಯ ಕಾರ್ಯಕಲಾಪಗಳು ಸುಸೂತ್ರವಾಗಿ ನಡೆಯಬೇಕು ಎನ್ನುವುದೊಂದು ಬಿಟ್ಟರೆ ನನ್ನ ಮನಸ್ಸಿನಲ್ಲಿ ಬೇರೇನೂ ಇಲ್ಲ.

ಶ್ರೀ ಡಿ.ವಿ.ಸದಾನಂದಗೌಡ:- ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿ ಒಂದು ಅಧಿಕೃತ ವಿರೋಧ ಪಕ್ಷಕ್ಕೂ ಇದೆ.

ಶ್ರೀ ಕೆ.ಕರಿಯಣ್ಣ:- ಅವರು ಸುಮ್ಮನೆ ಭಾಷಣ ಮಾಡುತ್ತಿದ್ದಾರೆ. ಅಲ್ಲಿಂದ (ಬಾವಿಯಿಂದ)ಬರುವುದು; ಭಾಷಣ ಮಾಡುವುದು, ಇದೇ ಆಗುತ್ತಿದೆ.

ಶ್ರೀ ಡಿ.ವಿ.ಸದಾನಂದಗೌಡ:- ನಾವು ಎಷ್ಟು ಭಾಷಣ ಮಾಡಿದರೂ ತಮ್ಮ ನಿಲುವಿನಲ್ಲಿ ಬದಲಾವಣೆಯಾಗುತ್ತಿಲ್ಲವಲ್ಲಾ?

(ಗೊಂದಲ)

ಅಧ್ಯಕ್ಷರು:- ಮಾನ್ಯ ಯಾವಗಲ್‌ರವರೆ, ತಾವು ಭಾಷಣವನ್ನು ಪ್ರಾರಂಭ ಮಾಡಿ.

(ಗೊಂದಲ)

ಶ್ರೀ ಬಿ.ಆರ್.ಯಾವಗಲ್:-ಮಾನ್ಯ ಅಧ್ಯಕ್ಷರೆ, ದಯಮಾಡಿ ತಾವು ನಮ್ಮ ರಕ್ಷಣೆಗೆ ಬರಬೇಕು. ಕಳೆದ ಒಂದು ವಾರದಿಂದ ಉದ್ದೇಶಪೂರ್ವಕವಾಗಿಯೇ ಇವರು ಗೊಂದಲ ಮಾಡುತ್ತಿದ್ದಾರೆಂಬ ಭಾವನೆ ಬರುತ್ತಿದೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗಬಾರದು, ರಾಜಕೀಯ ಹಿತಾಸಕ್ತಿಯನ್ನೇ ಮುಂದುವರೆಸಬೇಕೆಂಬ ಉದ್ದೇಶದಿಂದ ಇವರು ಹೀಗೆ ಮಾಡುತ್ತಿದ್ದಾರೆ. ದಯಮಾಡಿ ತಾವು ಸದನದ ಸದಸ್ಯರ ಹಕ್ಕನ್ನು ರಕ್ಷಣೆ ಮಾಡಬೇಕು. ಯಾವುದೇ ಕಲಾಪ ನಡೆಯಲು ಬಿಡದಿರುವ ಇವರ ನೀತಿಯ ಬಗ್ಗೆ ದಯಮಾಡಿ ಏನಾದರೂ ತೀರ್ಮಾನಕ್ಕೆ ಬರಬೇಕು. ಇದಕ್ಕೆ ಏನಾದರೂ ಮೋಕ್ಷವನ್ನು ಕೊಡಬೇಕು. ಶವಪೆಟ್ಟಿಗೆ ಪ್ರಕರಣ ಎಲ್ಲಿಗೆ ಬಂತು ಎಂಬ ಬಗ್ಗೆ ಇವರನ್ನು ಕೇಳಬೇಕು. ಕೇಂದ್ರದ ರಕ್ಷಣಾ ಖಾತೆಯ ಶವಪೆಟ್ಟಿಗೆ ಪ್ರಕರಣ ಎಲ್ಲಿಗೆ ಬಂತು ಎಂದು ಕೇಳಬೇಕು. ಇವರೇನು ಬಹಳ ಹರಿಶ್ಚಂದ್ರರೇ?

(ಗೊಂದಲ)

ಶ್ರೀ ಸಿ.ಎಸ್.ನಾಡಗೌಡ:- ಮಾನ್ಯ ಅಧ್ಯಕ್ಷರೆ, ತಾವು ರಕ್ಷಣೆಗೆ ಬರಬೇಕು. ಹೀಗಾದರೆ ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಆಗುವುದಿಲ್ಲ. ತಾವು ತಮ್ಮ ಹಕ್ಕನ್ನು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ನಿನ್ನೆ ಆರ್.ಎಸ್.ಎಸ್. ರ್ಯಾಲಿ ಏನು ಮಾಡಿದರು. ಅಲ್ಲಿ ಮ್ಯೂಜಿಕಲ್ ಚೇರ್ ಇವೆಂಟ್ ಇತ್ತು ಎಂದು ಕಾಣುತ್ತದೆ. ಅದನ್ನು ಇಲ್ಲಿ ಅಭ್ಯಾಸ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಜಗದೀಶ್ ಶೆಟ್ಟರ್‌ರವರೆ, ನೀವು ನಾಯಕರಿದ್ದೀರಿ, ತಮ್ಮ ಸದಸ್ಯರುಗಳಿಗೆ ಹೇಳಿ, ಹೀಗಾದರೆ ಸಭೆಯ ಕಾರ್ಯಕಲಾಪ ನಡೆಸಲು ಹೇಗೆ ಆಗುತ್ತದೆ? ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಅವಕಾಶ ಮಾಡಿಕೊಡಿ.

(ಗೊಂದಲ)

ಈಗ ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 3 ಗಂಟೆ 37 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ನಾಳೆ ದಿನಾಂಕ 29ನೇ ಜನವರಿ 2002ರ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)